## ಸರಕಾರಿ ಉನ್ನತ ಪ್ರೌಢ ಶಾಲೆ ಪೈವಳಿಕೆ ಕಾಯರ್ ಕಟ್ಟೆ



# ಸ್ಫುರಣ

# ಕಾಯರ್ ಕಟ್ಟೆ ಶಾಲೆಯಲ್ಲಿ ವಿಜೃಂಭಣೆಯಿಂದ ನಡೆದ ಶಾಲಾ ಪ್ರವೇಶೋತ್ಸವ

ಜೂನ್ : 1 : ಜಿ. ಎಚ್. ಎಸ್. ಎಸ್ ಪೈವಳಿಕೆ ಕಾಯರ್ ಕಟ್ಟೆ ಶಾಲೆಯಲ್ಲಿ ಜೂನ್ 1 ರಂದು ಶಾಲಾ ಪ್ರವೇಶೋತ್ಸವವು ವಿಜೃಂಭಣೆಯಿಂದ ಜರಗಿತು.ಹಲವು ಮಕ್ಕಳು ಖುಷಿಯಿಂದ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ. ಶಾಲೆಯ ಈ ಕಾರ್ಯಕ್ರಮದ ಮೊದಲು ರಾಜ್ಯಮಟ್ಟದಲ್ಲಿ ನಡೆಯುವ ಶಾಲಾ ಪ್ರವೇಶೋತ್ಸವದ ನೇರ ಪ್ರಸಾರವನ್ನು ಪರದೆಯ ಮೂಲಕ ಮಕ್ಕಳಿಗೆ ತೋರಿಸಲಾಯಿತು. ಪ್ರವೇಶೋತ್ಸದ ಉದ್ಘಾಟನೆಯನ್ನು ಜಿಲ್ಲಾ ಪಂಚಾಯತ್ ಸದಸ್ಯ ಶ್ರೀ ನಾರಾಯಣ ನಾಯ್ಕರವರು ನೆರವೇರಿಸಿದರು. ಪಂಚಾಯತ್ ವಾರ್ಡ್ ಸದಸ್ಯ ಶ್ರೀ ಅಬ್ದುಲ್ ರಝಾಕ್ ಅಧ್ಯಕ್ಷತೆ ವಹಿಸಿದ್ದರು. ಮುಖೋಪಾಧ್ಯಯರಾದ ಶ್ರೀ ಶಾಹುಲ್ ಹಮೀದ್ ರವರು ಶಾಲಾ ಚಟುವಟಿಕೆಗಳ ಕುರಿತಾದ ಒಂದು ಚಿಕ್ಕ ವೀಡಿಯೋವನ್ನು ತೋರಿಸಲಾಯಿತು. ಆ ಸಮಯದಲ್ಲಿ ಮಕ್ಕಳೆಲ್ಲರೂ ತಮ್ಮ ಚಿತ್ರ ಕೂಡ ಅದರಲ್ಲಿ ಬಂದಿದೆಯೋ ಎಂದು ಕುತೂಹಲದಿಂದ ನೋಡಿದರು.ನಂತರ ಎಲ್ಲರಿಗೂ ಸಿಹಿ ತಿಂಡಿ ಕೊಟ್ಟರು. ಹೊಸದಾಗಿ ಬಂದಂತ ಮಕ್ಕಳು ತಮ್ಮ ಪರಿಚಯವನ್ನು ಹಳೆಯ ಮಕ್ಕಳಿಗೆ ತಿಳಿಸಿದರು.ಹೊಸಮಕ್ಕಳಿಗೋಸ್ಕರ ಕಲಿಕೋಪಕರಣಗಳನ್ನು ವಿತರಿಸಿದರು. ಕೊನೆಯದಾಗಿ ಶಾಲಾ ಹಿರಿಯಅಧ್ಯಾಪಕಿಯಾದ ಶ್ರೀಮತಿ

ಜ್ಯೂನ್ 21

# ವಿಶ್ವ ಯೋಗದಿನ



ವಿಶ್ವ ಯೋಗದಿನದ ಪ್ರಯುಕ್ತ ನಮ್ಮ ಶಾಲೆಯಲ್ಲಿ ಮಕ್ಕಳಿಗೆ ವಿವಿಧ ಆಸನಗಳನ್ನು ದೈಹಿಕ ಶಿಕ್ಷರಾದ ಶ್ರೀ ಮೊಯ್ದು ಕುಞ್ಞಿ ಹೇಳಿಕೊಟ್ಟರು. ಕಾರ್ಯಕ್ರಮದಲ್ಲಿ ಶಾಲಾ ಪ್ರಭಾರ ಮುಖ್ಯೋಪಧ್ಯಾಯರು ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು.

ಜೂಲೈ 1




## ರ ದಿನ

2023-24 ನೇ ವರ್ಷದ ವೈದ್ಯರದಿನವನ್ನು ಸರಕಾರಿ ಪ್ರೌಢ ಶಾಲೆಯಲ್ಲಿ ಆಚರಿಸಲಾಯಿತು.

ವೈದ್ಯರ ದಿನದ ಮಹತ್ವವನ್ನು ತಿಳಿಸುವುದಕ್ಕಾಗಿ ಪೈವಳಿಕೆಯ ದಂತ ವೈದ್ಯ ಆಸ್ಪತ್ರೆಯ ವೈದ್ಯರಾದ ಡಾ. ಕೃಷ್ಣ ಶರ್ಮ ಅವರನ್ನು ಆಹ್ವಾನಿಸಲಾಯಿತು. ಇವರು ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು. ಶಾಲಾ ಅಧ್ಯಾಪಕಿ ಶ್ರೀಮತಿ ಪ್ರಿಯಾಂಕಾ ಟೀಚರ್ ಅವರು ವೈದ್ಯರ ದಿನದ ಮಹತ್ವವನ್ನು ವಿವರಿಸಿದರು.

# Little Kite ಪೂರ್ವಭಾವಿ ಶಿಬಿರ 2023-26



ತಾರೀಕು 15-07-2023 ರಂದು ಜಿ. ಎಚ್. ಎಸ್. ಎಸ್ ಪೈವಳಿಕೆ ಶಾಲೆಯಲ್ಲಿ 2023-26 ನೇ ಸಾಲಿನ ಶೈಕ್ಷಣಿಕ ವರ್ಷದ Little Kite ನ ಪೂರ್ವಭಾವಿ ಶಿಬಿರದ ಉದ್ಘಾಟನಾ ಕಾರ್ಯಕ್ರಮವು ನಡೆಯಿತು.

ಈ ಕಾರ್ಯಕ್ರಮವನ್ನು ಶಾಲಾ ಪ್ರಭಾರ ಮುಖ್ಯೋಪಾಧ್ಯಾಯರಾದ ಶ್ರೀ ಹರೀಶ್ ಕುಮಾರ್ ಸರ್ ಉದ್ಘಾಟಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಜಿ. ಎಚ್. ಎಸ್. ಎಸ್ ಬೇಕೂರು ಶಾಲೆಯ ಅಧ್ಯಾಪಿಕೆ ಶ್ರೀಮತಿ ಭಾಗ್ಯಲಕ್ಷ್ಮಿ .ಕೆ ಇವರು little kite ನ ಕುರಿತಾಗಿ ವಿಧ್ಯಾರ್ಥಿಗಳಿಗೆ ಮಾಹಿತಿಯನ್ನು ನೀಡಿದರು. ನಮ್ಮ ಶಾಲೆಯ ಅಧ್ಯಾಪಿಕೆ ಶ್ರೀಮತಿ ಪ್ರಿಯಾಂಕ ಟೀಚರ್ ಇವರು ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು. Little kite ನ Master ಶ್ರೀಮತಿ ರಶ್ಮಿತಾ ಟೀಚರ್ ಅವರ ಸ್ವಾಗತ ಭಾಷಣದೊಂದಿಗೆ ಆರಂಭಗೊಂಡ ಕಾರ್ಯಕ್ರಮವನ್ನು ಶ್ರೀ ಪ್ರಭಾಕರ್ ಸರ್ ಅವರು ಮುಕ್ತಾಯಗೊಳಿಸಿದರು.

# ಶಾಲಾ ಕಲೋತ್ಸವ ೨೦೨೩-೨೪




೨೦೨೩-೨೪ ನೇ ಶೈಕ್ಷಣಿಕ ಶಾಲಾ ಕಲೋತ್ಸವ ದಿನಾಂಕ ೧೯-೧೦-೨೦೨೩ ರಂದು ನಡೆಯಿತು.ವಾರ್ಡ್ ಮೆಂಬರ್ ಅಬ್ದುಲ್ ರಝಾಕ್ ಚಿಪ್ಪಾರ್ ಕಾರ್ಯಕ್ರಮ ಉದ್ಘಾಟಿಸಿದರು.ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಹಮೀದ್ ಅಧ್ಯಕ್ಷತೆ ವಹಿಸಿದರು.ಎಸ್.ಎಮ್.ಸಿ ಚೆಯರ್ ಮೇನ್ ಅಬ್ದುಲ್ ಅಸೀಸ್,ಸಿದ್ದೀಕ್ ಉಸ್ತಾದ್,ಶಾಲಾ ಪ್ರಭಾರ ಮುಖ್ಯೋಪಾಧ್ಯಾಯರಾದ ಹರೀಶ್ ಕುಮಾರ್ ಮೊದಲಾದವರು ಉಪಸ್ಥಿತರಿದ್ದರು.ಪ್ರಾಂಶುಪಾಲರಾದ [ಪ್ರಭಾರ] ರಾಜೇಂದ್ರ ಸ್ವಾಗತಿಸಿದರು.ಅಧ್ಯಾಪಕಿ ಬೇಬಿ ಟೀಚರ್ ಕಾರ್ಯಕ್ರಮವನ್ನು ನಿರೂಪಿಸಿದರು.ಹಯರ್ ಸೆಕೆಂಡರಿ ಹಾಗೂ ಹೈಸ್ಕೂಲ್ ವಿಭಾಗದ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಯಲ್ಲಿ ಭಗವಹಿಸಿದರು.

## ಗೆಳತಿಯರ ಸಾಹಸ



“ಅರೆ, ಶೀಲಾ ನಿಲ್ಲು. ನಾನೂ ಕೂಡ ನಿನ್ನ ಜೊತೆಗೆ ಬರುತ್ತೇನೆ‘ ಎಂದು ಗೌರಿ ಓಡುತ್ತಾ ಹೇಳಿದಳು. “ನಿನ್ನಂತ ಹುಚ್ಚಿಯ ಜೊತೆಗೆ ಯಾರು ಬರುತ್ತಾರೆ ಹೇಳು” ಎಂದು ಶೀಲಾ ನಗುತ್ತಾ ಹೇಳಿದಳು. ಇದನ್ನು ಕೇಳಿದ ಗೌರಿಗೆ ತುಂಬಾ ಬೇಸರವಾಯಿತು. ಅವಳು ಏನೂ ಮಾತನಾಡದೆ ಮುಂದೆ ನಡೆದಳು. ಶೀಲಾ ತುಂಬಾ ಕೆಟ್ಟವಳು. ಅವಳು ಗೌರಿಯನ್ನು ಯಾವಾಗಲೂ ದೂರುತ್ತಾ ಇರುತ್ತಾಳೆ. ಆದರೆ ಗೌರಿಯು ಬುದ್ಧಿವಂತಿ ಮತ್ತು ಎಲ್ಲರಿಗೂ ಸಹಾಯ ಮಾಡುವ ಹುಡುಗಿ. ಗೌರಿಗೆ ಅಪ್ಪ ಅಮ್ಮ ಯಾರು ಇಲ್ಲ. ಅಜ್ಜಿ ಒಬ್ಬಳೇ ಇರುವುದು.

ಅಂದು ಶನಿವಾರ. ಶೀಲಾಳ ಅಮ್ಮ ಅವಳಗೋಸ್ಕರ ದೊಡ್ಡ ಕೇಕನ್ನು ತರಲೆಂದು ಪೇಟೆಗೆ ಹೋಗಿದ್ದರು. ಯಾಕೆಂದರೆ ಅಂದು ಅವಳ ಹುಟ್ಟು ಹಬ್ಬ. ಶೀಲಾ ಅಂದು ಎಲ್ಲಾ ಗೆಳತಿಯರನ್ನು ತನ್ನ ಮನೆಗೆ ಕರೆದಿದ್ದಳು. ಆದರೆ

ಗೌರಿಯನ್ನು ಮಾತ್ರ ಕರೆಯಲಿಲ್ಲ. ಶೀಲಾ ಅವಳ ಮನೆಯ ಮಾಳಿಗೆಯ ಮೇಲೆ ಆಚೇಚೆ ಹೋಗುತ್ತಿದ್ದಳು. ಆಗ ಗೌರಿ "ಹುಟ್ಟು ಹಬ್ಬದ ಶುಭಾಶಯಗಳು ಶೀಲಾ" ಎಂದು ಗಟ್ಟಿಯಾಗಿ ಹೇಳಿದಳು. "ನೀನು ಯಾಕೆ ಇಲ್ಲಿಗೆ ಬಂದದ್ದು?" ಎಂದು ಶೀಲಾ ಕೇಳಿದಾಗ " ಇಂದು ನಿನ್ನ ಹುಟ್ಟು ಹಬ್ಬ ತಾನೇ ಆದಕಾರಣ ನಾನು ಇಲ್ಲಿಗೆ ಬಂದದ್ದು" ಎಂದು ಗೌರಿ ಹೇಳದಳು."ನನ್ನ ಹುಟ್ಟು ಹಬ್ಬಕ್ಕೆಲ್ಲಾ ನಿನ್ನಂತಹ ಬಡವರು ಬರುವ ಅಗತ್ಯವಿಲ್ಲ" ಎಂದು ಶೀಲಾ ಹೇಳಿದಾಗ ಅವಳು ಕೂಗುತ್ತಾ "ದಯವಿಟ್ಟು ನಾನು ನಿನ್ನ ಹುಟ್ಟುಹಬ್ಬಕ್ಕೆ ಬರುತ್ತೇನೆ ಶೀಲಾ"ಎಂದು ಬೇಡಿಕೊಂಡಾಗ ಶೀಲಾಳಿಗೆ ಒಂದು ಆಲೋಚನೆ ಹೊಳೆಯುತ್ತದೆ 'ನಾನು ಇವಳನ್ನು ನನ್ನ ಹುಟ್ಟು ಹಬ್ಬಕ್ಕೆ ಕರೆದು ಇವಳಿಗೆ ಪಾತ್ರೆ ತೊಳೆಯುವ ಕೆಲಸವನ್ನು ಕೊಡುವ ' ಎಂದು ಯೋಚಿಸುತ್ತಾ "ಹಾ, ಗೌರಿ ನೀನು ನನ್ನ ಹುಟ್ಟುಹಬ್ಬಕ್ಕೆ ಬರಬಹುದು,ಆದರೆ ನೀನು ಹುಟ್ಟುಹಬ್ಬಕ್ಕೆ ಬಂದು ಪಾತ್ರೆ ತೊಳೆಯಬೇಕು,ಆಗಬಹುದಾ "ಎಂದು ಶೀಲಾ ಕೇಳಿದಳು.ಗೌರಿಗೆ ಶೀಲಾಳ ಮಾತನಾಡದೆ ಒಪ್ಪಿಕ್ಕೊಳ್ಳುತ್ತಾಳೆ.

ಮರುದಿನ ಬೆಳಗ್ಗೆ ಶೀಲ ತನ್ನ ಹುಟ್ಟುಹಬ್ಬವಾದ ಕಾರಣ ಅವಳು ಹೊಸ ಉಡುಪನ್ನು ಧರಿಸಿ ಗೆಳೆತಿಯರ ಜೊತೆಗೆ ಮಾತನಾಡುತ್ತಾ ಇದ್ದಳು.ಆಗ ಗೌರಿ ಅಲ್ಲಿಗೆ ಬರುತ್ತಾಳೆ. "ಏ...ಗೌರಿ ಬೇಗ ಹೋಗಿ ಪಾತ್ರೆ ತೊಳಿ "ಎಂದು ಶೀಲ ಎಲ್ಲರ ಮುಂದೆ ಗಟ್ಟಿಯಾಗಿ ಹೇಳಿದಾಗ ಅಲ್ಲಿದ್ದವರೆಲ್ಲರೂ ನಗಲು ಪ್ರಾರಂಭಿಸಿದರು.ಗೌರಿ ಬೇಸರದಿಂದ ಪಾತ್ರೆಯತ್ತ ನಡೆಯುವಳು.ಸ್ವಲ್ಪ ಸಮಯದ ಬಳಿಕ ಪಾರ್ಟಿ ಶುರುವಾಗುತ್ತದೆ.ಶೀಲಾ ಮತ್ತು ಅವಳ ಗೆಳತಿಯರು ನೃತ್ಯ ಮಾಡುತ್ತಿರುತ್ತಾರೆ. ಆದರೆ ಗೌರಿಯು ಅಡುಗೆ ಕೋಣೆಯಲ್ಲಿ ಪಾತ್ರೆ ತೊಳೆಯುತ್ತಾ ಇರುತ್ತಾಳೆ.ಆಗ ಶೀಲಾಳ ಅಮ್ಮ ಅಲ್ಲಿಗೆ ಬರುತ್ತಾರೆ. ಶೀಲಾಳ ಅಮ್ಮ ತುಂಬಾ ಒಳ್ಳೆಯವರು.ಅವರಿಗೆ ಗೌರಿ ಪಾತ್ರೆ ತೊಳೆಯುತ್ತಾ ಇದ್ದಾಳೆ ಎನ್ನುವುದು ಗೊತ್ತಿರಲಿಲ್ಲ.ಅವರು ಅಡುಗೆ ಕೋಣೆಗೆ ಹೋಗುತ್ತಾರೆ. "ಗೌರಿ ನೀನು ಇಲ್ಲೇನು ಮಾಡುತ್ತಿದ್ದಿಯಾ "

ಎಂದು ಶೀಲಾಳ ಅಮ್ಮ ಕೇಳುತ್ತಾರೆ. “ಏನಿಲ್ಲ , ಪಾತ್ರೆ ತೊಳೆಯುತ್ತಿದ್ದೇನಮ್ಮ ” ಎನ್ನುತ್ತಾಳೆ ಗೌರಿ. “ನಿನಲ್ಲಿ ಪಾತ್ರೆ ತೊಳೆಯಲು ಯಾರು ಹೇಳಿದರು?” ಎಂದು ಶೀಲಾಳ ಅಮ್ಮ ಪ್ರಶ್ನಿಸಿದಾಗ “ಯಾರು ಹೇಳಲಿಲ್ಲ . ನಾನೇ ಸುಮ್ಮನೆ ತೊಳೆಯುವುದು” ಎಂದು ಗೌರಿ ಉತ್ತರಿಸುವಳು.ಶೀಲಾಳ ಅಮ್ಮನಿಗೆ ಅಲ್ಲಿ ನಡೆದ ಘಟನೆ ತಿಳಿಯುತ್ತದೆ. ಅವರು ಗೌರಿಯನ್ನು ಪಾರ್ಟಿಯಾಗುವ ಸ್ಥಳಕ್ಕೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಶೀಲಾ ಮತ್ತು ಅವಳ ಗೆಳತಿಯರು ನೃತ್ಯ ಮಾಡುತಿರುತ್ತಾರೆ. “ಶೀಲಾ ಇದೇಲ್ಲಾ ನಿನ್ನ ಬುದ್ಧಿ , ಮನೆಗೆ ಬಂದ ನೆಂಟರನ್ನು ಪಾತ್ರೆ ತೊಳೆಯಲು ಹೇಳುವುದಾ?” ಎಂದು ಶೀಲಾಳ ಅಮ್ಮ ಪಾರ್ಟಿಯನ್ನು ನಿಲ್ಲಿಸಿ ಹೇಳಿದರು. “ಇಲ್ಲಮ್ಮ ನಾನು ಗೌರಿಯಲ್ಲಿ ಪಾತ್ರೆ ತೊಳೆಯಲು ಹೇಳಲಿಲ್ಲ ” ಎಂದು ನಾಚಿಕೆಯಿಂದ ಹೇಳುತ್ತಾಳೆ.

ಅಲ್ಲಿದ್ದವರೆಲ್ಲಾ ಶೀಲಾಳನ್ನು ನೋಡಿ ನಗುತ್ತಿದ್ದರು.ಇದನ್ನು ಕಂಡ ಗೌರಿಗೆ ತುಂಬಾ ಬೇಸರವಾಯಿತು. “ನಿಜ ಹೇಳ್ಬೇಕೆಂದರೆ ಶೀಲಾ ನನಲ್ಲಿ ಪಾತ್ರೆಯನ್ನು ತೊಳೆಯಲು ಹೇಳಲಿಲ್ಲ ನಾನೇ ಸುಮ್ಮನೆ ತೊಲೆಯುತ್ತಿದ್ದದ್ದು ” ಎಂದು ಗೌರಿ ಹೇಳಿದಾಗ ಶೀಲಾಳಿಗೆ ತಾನು ಮಾಡಿದ ತಪ್ಪಿಗೆ ತುಂಬಾನೇ ಬೇಸರವಾಗುತ್ತದೆ. ಅವಳು "ಗೌರಿ ನನ್ನನ್ನು ಕ್ಷಮಿಸು. ಅಮ್ಮ ಹೇಳ್ಬೇಕೆಂದರೆ ನಾನೇ ಗೌರಿಯಲ್ಲಿ ಪಾತ್ರೆಯನ್ನು ತೊಳೆಯಲು ಹೇಳಿದ್ದು . ನಾನು ಅವಳನ್ನು ಸೇವಕಿಯಾಗಿ ನೋಡುತ್ತಿದ್ದೆ. ಆದರೆ ಅವಳಿಗೆ ನನ್ನ ಮೇಲೆ ಅಷ್ಟೊಂದು ಪ್ರೀತಿ ಇತ್ತು ಎಂದು ನನಗೆ ಗೊತ್ತಿರಲಿಲ್ಲ .ಮತ್ತೆ ನಾನು ಅವಳಿಗೆ ಎಷ್ಟೇ ಬೈದರೂ ಅವಳು ನನ್ನ ಜೊತೆಗೆ ಬರುತ್ತಿದಳು" ಎಂದು ಕೂಗಿಕೊಂಡು ಹೇಳಿದಳು ಶೀಲಾ. ಆಗ ಶೀಲಾಳ ಅಮ್ಮನಿಗೂ ಕೂಡ ಬಹಳ ಬೇಸರವಾಯಿತ್ತು. ಶೀಲಾಳ ಅಮ್ಮ ತನ್ನ ಮಗಳು ತಪ್ಪನ್ನು ಮಾಡಿದರೂ ಸತ್ಯ ಹೇಳಿದ್ದಾಲಲ್ಲಾ ಎಂದು ಬೇಸರ ಮತ್ತು ಸಂತೋಷಪಟ್ಟರು.ಗೌರಿ ಕೂಗಿಕೊಂಡು ತನ್ನ ಮನೆಗೆ ಹೋದಳು. ನಡೆದ ವಿಷಯಗಳನ್ನು ತನ್ನ

ಅಜ್ಜಿಯಲ್ಲಿ ಹೇಳಿದಳು.

ಮಾರನೇಯ ದಿನ ಗೌರಿ ನಡೆದುಕೊಂಡು ಶಾಲೆಗೆ ಹೋಗುತ್ತಿರುವಾಗ ಶೀಲಾ ಓಡಿಕೊಂಡು ‘ಗೌರಿ ನನನ್ನು ಕ್ಷಮಿಸು, ನಿನ್ನೆ ಮಾಡಿದ ತಪ್ಪಿಗೆ ?” ಎಂದು ಗೌರಿಯಲ್ಲಿ ಬೇಡಿಕೊಂಡಳು. “ನಿನ್ನೆ ಮಾಡಿದ ತಪ್ಪು ನಿನ್ನೆಗೆ ಮುಗಿದಿದೆ. ಈಗ ಅದರ ಸುದ್ಧಿಯನ್ನು ಯಾಕೆ ತೆಗೆಯುತ್ತೀಯಾ?” ಎಂದು ಗೌರಿ ಶೀಲಾಳನ್ನೇ ನೋಡುತ್ತಾ ಹೇಳಿದಳು. “ಹಾಗಾದರೆ ನಾವು ಈಗಲೂ ಗೆಳತಿಯರು ನಿಜ ಹೇಳು‘

ಎಂದು ಕುತೂಹಲದಿಂದ ಹೇಳಿದಳು ಶೀಲಾ.ಆಗ ಗೌರಿ ನಗುತ್ತಾ ‘ಖಾಲಿ ಗೆಳತಿಯರಲ್ಲಾ ಬೆಸ್ಟ್ ಗೆಳತಿಯರು ನನ್ನ ಮುದ್ದಿನ ಶೀಲಾ‘
ಎಂದು ಗೌರಿ ಹೇಳಿದಾಗ ಶೀಲಾ ನಗುತ್ತಾ ‘ಹಾಗಾದರೆ ತೆಗೆದುಕೊಳು, ಈ ಚೀಲದಲ್ಲಿರುವ ಎಲ್ಲಾ ಡೈರಿಮಿಲ್ಕ್ ‘ಎಂದು ಶೀಲಾ ಚೀಲವನ್ನು ತೋರಿಸುತ್ತಾ ಹೇಳಿದಳು. “ವಾವ್ ಇಷ್ಟೊಂದು ಡೈರಿಮಿಲ್ಕ್ ಗಳು ಧನ್ಯವಾದ.ತಗೋ ನಿನಗೂ ಸ್ವಲ್ಪ‘ ಎಂದು ಗೌರಿ ತುಂಬಾ ಸಂತೋಷದಿಂದ ಹೇಳಿದಳು. “ಶೀಲಾ ನಿನಗೆ ನೆನಪಿದೆಯಾ, ಇವತ್ತು ಗಣಿತ ಪರೀಕ್ಷೆ ಇದೆ ಎಂದು ನಿನ್ನೆ ಅಧ್ಯಾಪಕರು ಹೇಳಿದ್ದಾರಲ್ಲ.ನೀನು ಕಲಿತ್ತಿದ್ದೀಯಾ?”ಎಂದು ಗೌರಿ ಕೇಳುತ್ತಾಳೆ. “ಅಯ್ಯೋ ದೇವರೆ, ಇವತ್ತು ಗಣಿತ ಪರೀಕ್ಷೆಯಾ! ನಾನಂತು ಕಲಿಯಲೇ ಇಲ್ಲ, ಈಗೇನು ಮಾಡುವುದು” ಎಂದು ಅಳುತ್ತಾ ಶೀಲಾ ಹೇಳಿದಳು. “ನೀನೇನು ಚಿಂತಿಸಬೇಡ ಶೀಲಾ, ನಾನು ನಿನಗೆ ಗಣಿತದ ಸ್ವಲ್ಪ ಲೆಕ್ಕಗಳನ್ನು ಹೇಳಿಕೊಡುತ್ತೇನೆ” ಎಂದು ಧೈರ್ಯವನ್ನು ಹೇಳದಾಗ ಶೀಲಾಳಿಗೆ ಬಹಳ ಸಂತೋಷವಾಯಿತು.‘ಥ್ಯಾಂಕ್ಸ್ ಗೌರಿ ‘ ಎಂದು ಶೀಲಾ ನಗುತ್ತಾ

ಹೇಳಿದಳು. ಅವರು ಇಬ್ಬರು ಬೇಗ ಶಾಲೆಗೆ ತಲುಪಿದರು. ಗೌರಿ ಶೀಲಾಳಿಗೆ ಗಣಿತ ಲೆಕ್ಕವನ್ನು ಹೇಳಿಕೊಡುತ್ತಿದಳು. ಪರೀಕ್ಷೆ ಆರಂಭವಾಯಿತು. ಅವರಿಬ್ಬರು ಪರೀಕ್ಷೆಯನ್ನು ಬರೆದು ಮನೆಗೆ ಹೋಗುತ್ತಿದ್ದಾಗ ಗಣಿತದ ಬಗ್ಗೆ ಉತ್ತರವನ್ನು ಹೇಳುತ್ತಾ ಇದ್ದರು.ನಂತರ ಅವರು ತಮ್ಮ ತಮ್ಮ ಮನೆಯ ಕಡೆಗೆ ನಡೆದರು.

ಮರುದಿನ ಬೆಳಗ್ಗೆ ಇಬ್ಬರು ಜೊತೆಯಾಗಿ ಶಾಲೆಗೆ ನಡೆದುಕೊಂಡು ಹೋದರು.ಶಾಲೆಗೆ ತಲುಪಿದಾಗ ಅವರಿಬ್ಬರಿಗೆ ಖುಷಿಯನ್ನು ತಡೆಯಲಾಗಲಿಲ್ಲ .ಯಾಕೆಂದರೆ ಅವರಿಬ್ಬರು ನಿನ್ನೆ ಮಾಡಿದ ಗಣಿತ ಪರೀಕ್ಷೆಯಲ್ಲಿ ಪ್ರಥಮ ಸ್ಥಾನಗಳಿಸಿದ್ದರು.ಶಾಲೆ ಬಿಟ್ಟೊಡನೆ ಅವರಿಬ್ಬರು ನಡೆದುಕೊಂಡು ಉದ್ಯಾನಕ್ಕೆ ಹೋದರು.ಆಗ ಅಲ್ಲಗೆ ಒಬ್ಬ ಬಡ ಭಿಕ್ಷುಕ ಬೇಡಿಕೊಂಡು ಅವರ ಹತ್ತಿರಕ್ಕೆ ಬರುತ್ತಿದ್ದ .ಅವರಿಬ್ಬರು ಬಡ ಭಿಕ್ಷುಕನಿಗೆ ಅವರ ಕೈಯಲ್ಲಿದ್ದ ಉಪಹಾರವನ್ನು ಕೊಟ್ಟರು. ಹೀಗೆ ಮೆಲ್ಲ ಮೆಲ್ಲಗೆ ಗೌರಿಯನ್ನು ನೋಡಿ ಶೀಲಾಳು ಅವಳ ಒಳ್ಳೆಯ ಗುಣನಡತೆಯನ್ನು ಕಲಿತಲು.ಹೀಗೆ ಅವರು ಎಲ್ಲಾ ಪರೀಕ್ಷೆಗಳಲ್ಲಿ ಪಾಸಾಗಿ ಉನ್ನತ ಮಟ್ಟಕ್ಕೇರಿದರು. ಅದು ಮಾತ್ರವಲ್ಲದೆ ಒಳ್ಳೆಯ ಸಾಧನೆಯನ್ನು ಮಾಡಿದರು. ಇದನ್ನು ಅರಿತ ಸರಕಾರವು ಶೀಲಾ ಮತ್ತು ಗೌರಿಗೆ ಎರಡು ಚಿನ್ನದ ಪದಕವನ್ನು ನೀಡಿದರು. ಅಲ್ಲಿಗೆ ಅವರು ಸುಖದಿಂದ ಬಾಳಿದರು.

–ವೈಷ್ಣವಿ
೭ ನೇ ತರಗತಿ

# ಹಳ್ಳಿಯ ಜೀವನ



ಹಳ್ಳಿ ಜೀವನಕ್ಕೂ ಪಟ್ಟಣದ ಜೀವನಕ್ಕೂ ತುಂಬಾ ವ್ಯತ್ಯಾಸಗಳಿವೆ. ಹಳ್ಳಿಯಲ್ಲಿ ಪ್ರಮುಖವಾಗಿ ಬೆಟ್ಟ ,ಗುಡ್ಡೆ ,ಗದ್ದೆ,ಬಯಲು,ಮರ,ಗಿಡ,ಪ್ರಾಣಿ,ಪಕ್ಷಿ ಇತ್ಯಾದಿಗಳನ್ನು ಕಾಣಬಹುದು.ಹಳ್ಳಿಯಲ್ಲಿ ಸಂಪ್ರದಾಯಕ ಕುಟುಂಬಗಳು ಹೆಚ್ಚಾಗಿ ಕಂಡುಬರುತ್ತದೆ.ಸಂಜೆಯ ಸಮಯಗಳಲ್ಲಿ ಎಲ್ಲಾ ಮನೆ ಮಕ್ಕಳು ಒಟ್ಟು ಸೇರಿ ಲಗೋರಿ,ಕ್ರಿಕೆಟ್ ಹಾಗೂ ಇನ್ನಿತರ ಹಳ್ಳಿ ಆಟಗಳನ್ನು ಆಡುತ್ತಾ ಸಂಜೆಯ ಸಮಯವನ್ನು ಬಹಳ ಸಂತೋಷದಿಂದ ಕಳೆಯುತ್ತಾರೆ. ಹಳ್ಳಿಯ ಹಾಡುಭಾಷೆಗಳನ್ನು ಕೇಳಲು ತುಂಬಾನೇ ಖುಷಿಯಾಗುತ್ತದೆ.

ಹಳ್ಳಿಯ ವಾತಾವರಣವು ಹೆಚ್ಚು ಹಚ್ಚಹಸುರಿನಿಂದ ಕೂಡಿರುತ್ತದೆ.ತಂಪಾದ ಗಾಳಿಯು ಬೀಸುತ್ತವೆ.ಹಳ್ಳಿ ಎಂದರೆ ಒಂದು ಸುಂದರವಾದ ಪ್ರಕೃತಿಯಾಗಿ ದೆ ಸುತ್ತಮುತ್ತಲಿನಲ್ಲಿಯೇ ನಮಗೆ ಬೇಕಾಗುವಂತಹ ಔಷಧಿ ಗಿಡಗಳು,ಮರ,ಬಳ್ಳಿಗಳು ಸಿಗುತ್ತದೆ.ಹಳ್ಳಿ ಜನರ ಮನಸ್ಸು ಕೂಡಾ ತುಂಬಾನೇ ಶುದ್ಧವಾಗಿರುತ್ತದೆ.ಹಳ್ಳಿಯಲ್ಲಿ ಜೀವಿಸುತ್ತಿರುವ ಪ್ರತಿಯೊಂದು ಮನುಷ್ಯರೂ ಹಾಗೂ ಪ್ರಾಣಿ ಪಕ್ಷಿಗಳು ಪುಣ್ಯವಂತರು.

–ನಿಶ್ಮಿತ
೯ನೇ ತರಗತಿ

# ಒಂದು ಕಾಡಿನ ದಾರಿ



" ಅಮ್ಮ ಅಮ್ಮಾ ಒಮ್ಮೆ ಈಕಡೆ ಬಾಮ್ಮಾ " ಎಂದಳು ಮಿನ್ನು ."ಅರೇ ಏನಾಯಿತು ?ಯಾಕೆ ಹೀಗೆ ಕಿರುಚುತ್ತಿ ? " ಎಂದಳು ಅಮ್ಮ . " ಅಮ್ಮಾ ಇಲ್ಲಿ ನೋಡು,ನಮ್ಮ ಸುಂದರವಾದ ಹಿತ್ತಿಲು ಬತ್ತಿ ಹೋಗುತ್ತಿದೆ " ಎಂದಳು ಮಿನ್ನು . "ಅಯ್ಯೋ! ಅದೇನಾಯಿತು ? ” ಎಂದಳು ಅಮ್ಮ .ಮಿನ್ನು ಅಳುತ್ತಾ ತನ್ನ ಕೊಠಡಿಗೆ ನಡೆದಳು.ಅಮ್ಮ ಅವಳ ಹಿಂದೇನೆ ನಡೆದಳು." ಅಮ್ಮಾ ನಮ್ಮ ಹಿತ್ತಿಲು ಬತ್ತಿ ಹೋಗುತ್ತಿದೆ.ಇದನ್ನು ಹೇಗೆ ಉಳಿಸುವುದು ? "ಎಂದು ಕೇಳದಳು ಮಿನ್ನು . "ಪರವಾಗಿಲ್ಲ ಇದನ್ನು ನಾವು ಉಳಿಸೋಣ,ನೀನು ಬೇಸರ ಪಡಬೇಡ "ಎನ್ನುತ್ತಾ ಅಮ್ಮ ಹೊರಗೆ ನಡೆದಳು.ಮಿನ್ನು ಕೂಡ ಅಮ್ಮನ ಹಿಂದೆ ನಡೆದಳು."ನೋಡು ಮಿನ್ನು ನಾವು ಇದಕ್ಕೆ ನೀರು ಹಾಕೋಣ.ಆಗ ಅದು ಸರಿ ಆಗುತ್ತೇ" ಎಂದಳು ಅಮ್ಮ . ಮಿನ್ನು ಅಮ್ಮ ಹೇಳಿದ ಹಾಗೆ ಮಾಡಿದಳು.ನೀರನ್ನು ಗಿಡಗಳಿಗೆ ಸುರಿಸಿದಳು,ಆದರೆ ಏನೂ ಪ್ರಯೋಜನವಾಗಲಿಲ್ಲ ."ಅಮ್ಮ ಇದು ಯಾಕೆ ಬದುಕಲಿಲ್ಲ ? "."ನೋಡು ಮಿನ್ನೂ ,ನಾಳೆ ಕೂಡ ಗಿಡಗಳಿಗೆ ನೀರು ಹಾಯಿಸಬೇಕು" ಎಂದು ಅಮ್ಮ ಒಳಗೆ ನಡೆದಳು.ಮಿನ್ನುವಿಗೆ ಬಹಳ ಬೇಸರವಾಗಿತ್ತು.ಅಮ್ಮ ಮಿನ್ನುವಿಗೆ ಊಟ ಬಡಿಸಿದಳು.ಮಿನ್ನು ಊಟ ಮಾಡದೆ ಸುಮ್ಮನೆ ಕುಳಿತಿದ್ದಳು."ಮಿನ್ನು ಏನಾಯಿತು?ಯಾಕೆ ನೀನು ಊಟ ಮಾಡುವುದಿಲ್ಲ ?" ಎಂದು ಕೇಳದಳು ಅಮ್ಮ ."ನನಗೆ ಆ ಗಿಡಗಳು ಬದುಕಬೇಕು" ಎಂದಳು ಮಿನ್ನು .

ಮಾರನೇ ದಿನ ಬೆಳಗ್ಗೆ ಮಿನ್ನು ಎದ್ದಾಕ್ಷಣ ಹಿತ್ತಿಲಿಗೆ ಹೋದಳು.ಆದರೆ ಗಿಡ ಹಾಗೆಯೇ ಇತ್ತು.ಅವಳು ಅದಕ್ಕೆ ನೀರು ಹನಿಸಿದಳು.ಅವಳ ಅಮ್ಮ ಬಂದು "ಓಹೋ! ನೀನು ಪುನಃ ಆ ಗಿಡಗಳನ್ನು ನೋಡುತ್ತಿದ್ದೀಯಾ.ಯಾಕೆ? " ಎಂದು ಪ್ರಶ್ನಿಸಿದರು ಅಮ್ಮ ."ಅಯ್ಯೋ! ಅಮ್ಮಾ ನೀನೇ ನೋಡು,ನಮ್ಮ ಗಿಡದ ಅವಸ್ಥೇ" ಎಂದಳು ಮಿನ್ನು ."ನೋಡು ಮಿನ್ನು ನಾನು ನಿನಗೊಂದು ಸುಂದರವಾದ ಪ್ರದೇಶವನ್ನು ತೋರಿಸುತ್ತೇನೆ.ನನ್ನ ಜೊತೆ ಬಾ" ಎಂದರು ಅಮ್ಮ .ಅವರು ಒಂದು ಕಾಡಿಗೆ ತಲುಪಿದರು.ಆ ಸ್ಥಳವೂ ತುಂಬಾ ಶುಚಿಯಾಗಿ ಹಾಗೂ ಶಾಂತವಾಗಿತ್ತು.ಹಕ್ಕಿಗಳ ಚಿಲಿಪಿಲಿ,ದುಂಬಿಗಳ ಝೇಂಕಾರ,ಮೃಗಗಳೊಳಗಿನ

ಒಡೆನಾಟ,ಹೂವಿನ ಪರಿಮಳ....ಇತ್ಯಾದಿಗಳನ್ನೊಳಗೊಂಡು,ಒಟ್ಟಿನಲ್ಲಿ ಬಹಳ ಆಸ್ವಾದಕರಣೀಯ.ಇವುಗಳನ್ನೆಲ್ಲಾ ಆನಂದಿಸುತ್ತಾ ಇಬ್ಬರೂ ಮನೆಯತ್ತ ನಡೆದರು.ಮನೆ ತಲುಪಿದ ಮಿನ್ನು "ಅಮ್ಮಾ ಕಾಡಂತೂ ಬಹಳ ಸುಂದರವಾಗಿತ್ತು.ಅದನ್ನು ನೋಡಿ ನನಗೊಂದು ಉಪಾಯ ಹೊಳೆಯುತ್ತಿದೆ" ಎನ್ನುತ್ತಾ ಬೇಗನೇ ಹೋಗಿ ತನ್ನ ಮನೆ ಮುಂದಿನ ಹಿತ್ತಿಲಿಗೆ ನೀರೆರೆದಳು.ಮಾತ್ರವಲ್ಲದೆ ದನದ ಕೊಟ್ಟಿಯಿಂದ ಗೊಬ್ಬರವನ್ನೂ , ಬೂದಿಯನ್ನೂ ಹಾಕಿದಳು.

ಮೂರನೇದಿನ ಮಿನ್ನು ಶಾಲೆಗೆ ಹೋಗಿ ಹಿಂತಿರುಗುವ ವೇಳೆಯಲ್ಲಿ ಊರಿನವರೆಲ್ಲರೂ ಕಸಕಡ್ಡಿಗಳನ್ನು ಅಲ್ಲಲ್ಲಿ ಎಸೆಯುತ್ತಿರುವುದು ಅವಳ ಗಮನಸೆಳೆಯುತ್ತದೆ.ವಿಚಾರವನ್ನು ತಿಳಿದ ಅಮ್ಮನಿಗೆ ಒಂದು ಉಪಾಯ ಮೂಡಿಬಂತು."ಆಕರ್ಷಕ ಘೋಷಣಾವಾಕ್ಯವೇ ಇದನ್ನು ಸುಧಾರಿಸಲಿರುವ ಮಾರ್ಗವೆಂದೂ ನೀನು ಸಹಾಯ ಮಾಡಿದರೆ ಸಾಕೆಂದೂ" ಹೇಳದಳು ಅಮ್ಮ .ಅವುಗಳ ತಯಾರಿಯಾದ ತಕ್ಷಣವೇ ರಸ್ತೆಯ ಬೀದಿಬದಿಗಳಲ್ಲಿ ಅವನ್ನು ಅಂಟಿಸಿದರು.ಈ ಘೋಷಣಾವಾಕ್ಯವೂ ಓದುಗರ ಗಮನ ಸೆಳೆದುದರಿಂದ ತದನಂತರ ಯಾರೂ ಮಾಲಿನ್ಯವನ್ನು ಎಸೆಯಲಿಲ್ಲ .ಇವುಗಳನ್ನೆಲ್ಲಾ ನೋಡಿದ ಮಿನ್ನುವಿಗೆ ಬಹಳ ಖುಷಿಯಾಯಿತು.

ನಾಲ್ಕನೇ ದಿನ ಮಿನ್ನು ವನವನ್ನು ಆನಂದಗೊಳಿಸಲು ಸೌಂದರ್ಯಯುತವಾದ ಕಾಡಿಗೆ ಹೋದಳು.ಆದರೆ ಅಲ್ಲಿಯ ಪರಿಸ್ಥಿತಿಯನ್ನು ನೋಡಿದವಳಿಗೆ ದುಃಖ ಉಕ್ಕಿ ಬಂತು.ರಸ್ತೆ ಬದಿಯನ್ನು ಮಾಲಿನ್ಯ ಮುಕ್ತಗೊಳಿಸಿದ ಜನರು ಪ್ರಕೃತಿದತ್ತವಾದ ವನವನ್ನು ನಶಿಸಲು ತೊಡಗಿದ್ದಾರೆ ಎಂಬ ನೋವಿನಿಂದ ಅಲ್ಲಿದ್ದ ಕಸಕಡ್ಡಿಗಳನ್ನು ಶುಚಿಗೊಳಿಸಿ ಮನೆಗೆ ನಡೆದಳು.ಅಮ್ಮನಿಗೆ ವಿಷಯ ತಿಳಿಸಿದಳು.

ಐದನೇ ದಿವಸ ಈ ವಿಷಯದ ಕುರಿತು ಮಿನ್ನು ಮತ್ತು ಅವಳ ಅಮ್ಮ ಚರ್ಚೆ ನಡೆಸಿದರು.ಅಗ ಮಿನ್ನು "ಯೇಕಮ್ಮಾ? ಹೀಗೆ ಚಂತಿಸುತ್ತೀ! ಮುಂಚಿನ ಉಪಾಯವನ್ನೇ ಪ್ರಯೋಗಿಸೋಣ" ಎಂದಳು.ಮರುದಿನ ಕಾಡಿಗೆ ಹೋಗಿ ಘೋಷಣಾವಾಕ್ಯವನ್ನು ಅಂಟಿಸಿದರು.

ತಿಂಗಳುಗಳುರುಳಿದುವು.ಒಂದು ದಿನ ಮಿನ್ನು ಕಾಡಿನತ್ತ ನಡೆದಳು.ನೋಡುವುದೇನು!ನೀರು ಹರಿಯುವ ಬದಲು ಮಾಲಿನ್ಯದ ನದಿ ಹರಿಯುತ್ತಿದೆ,ದುಂಬಿಗಳ ಹಾಗು ಹಕ್ಕಿಗಳ ಹಾರಾಟದ ಬದಲು ಮಾಲಿನ್ಯಕ್ಕೆ ಸುತ್ತುಬರುವ ನೊಣಗಳನ್ನು ಕಂಡು ಮಿನ್ನು ಸ್ವಲ್ಪ ಸಮಯಕ್ಕೆ ಪ್ರತಿಮೆಯಂತಾದಳು.ಸಿಟ್ಟು ತಾಳಲಾರದೆ ಜೋರಾಗಿ ಎಲ್ಲರನ್ನು ಬೈಯ್ಯುತೊಡಗಿದಳು.ಅವಳ ಮಾತಿನಿಂದ ನಾಚಿಕೆಗೊಂಡ ಪರಿಸರದವರು ಇನ್ನು ತಾವು ಖಂಡಿತ ಹೀಗೆ ಮಾಡಲಾರರೆಂದು ಹೇಳಿದರು.ನಂತರ ಎಲ್ಲರೂ ಸೇರಿ ಕಾಡನ್ನು ಶುಚಿಗೊಳಿಸಿದರು.ಮುಂದೆ ಅವಳು ಆ ಊರಿನಲ್ಲೇ ಪ್ರಶಸ್ತಳಾದಳು.ಇಂದು ನೋಡಿದರೆ ಆ ಊರಿನಲ್ಲೊಂದೇ ಒಂದು ಕಸಕಡ್ಡಿಗಳಿಲ್ಲ .

ಅವಳ ತಾಯಿಗೆ ಈಗಲೂ ಅವರ ಮಗಳ ಮೇಲೆ ಹೆಮ್ಮೆ.

– ವೈಷ್ಣವಿ
೭ ನೇ ತರಗತಿ

# WATER



Water is one of the most vital needs of our body and constitutes about 60 per cent of our body's weight. Water helps in the digestion of food. The water present in blood carries and distributes essential nutrients such as minerals, vitamins and glucose to all the cells of the body. It also helps to flush out wastes from the body through sweat, urine and faeces. We must drink at least 8 to 10 glasses of water daily.

Alfa Asiya
9th Std

# ಶಿಕ್ಷಣದ ಮಹತ್ವ



ನಮ್ಮ ಜೀವನಕ್ಕೆ ಶಿಕ್ಷಣ ಬಹಳ ಮುಖ್ಯ.ಶಿಕ್ಷಣವಿಲ್ಲದಿದ್ದರೆ ನಮ್ಮ ಯಶಸ್ಸನ್ನುಗಳಿಸಲು ಸಾಧ್ಯವಿಲ್ಲ.ವ್ಯಕ್ತಿಯ ವ್ಯಕ್ತಿತ್ವ ವಿಕಾಸವಾಗಲು ಮತ್ತು ಉತ್ತಮ ಪ್ರಜೆಯಾಗಲು ಶಿಕ್ಷಣವು ಸಹಾಯಕವಾಗಿದೆ. ಶಿಕ್ಷಣವು ಒಂದು ಆಯುಧವಾಗಿದೆ.ಉತ್ತಮ ಶಿಕ್ಷಣವು ಸಮಾಜದ ಎಲ್ಲಾ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಲು ಸಹಾಯ ಮಾಡುತ್ತದೆ.

ಶಿಕ್ಷಣವಿಲ್ಲದವರು ಪಶುವಿಗೆ ಸಮಾನ ಎಂಬ ಮಾತಿದೆ. ಶಿಕ್ಷಣವಿಲ್ಲದವರು ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಶಿಕ್ಷಣವು ಒಳ್ಳೆಯ ಜೀವನ ನಡೆಸಲು ಕಲಿಸುತ್ತದೆ. ಉತ್ತಮ ಶಿಕ್ಷಣದಿಂದ ಮಾತ್ರ ಸಮಾಜದಲ್ಲಿ ಪ್ರೀತಿಯ ಸಂದೇಶ,ಮಾನವೀಯತೆಯ ಸಂದೇಶ ಸಾರಲು ಸಾಧ್ಯ. ಶಿಕ್ಷಣದಿಂದ ಉದ್ಯೋಗವನ್ನು ಸಾಧಿಸಬಹುದು.ಶಿಕ್ಷಣವು ನಮ್ಮೊಳಗಿನ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ.

ಫಾತಿಮತ್ ಫಝ್ಮೀನ. ಎಮ್

# ಶೈಕ್ಷಣಿಕ ಪ್ರವಾಸದ ವರದಿ



ನಾವು ೭/೨/೨೦೨೪ ಶನಿವಾರದಂದು ಏಂಗ್ರಿ ಬರ್ಡ್ ಎಂಬ ಬಸ್ಸಿನಲ್ಲಿ ಹಲವು ಕಡೆ ಪ್ರವಾಸಕ್ಕೆಂದು ಹೋದೆವು.ಮೊದಲನೆಯದಾಗಿ ನಾವು ಸೋಮನಾಥ ದೇವಸ್ಥಾನಕ್ಕೆ ಹೋಗಿ ನ್ನು ದೇವರ ಆಶಿರ್ವಾದವನ್ನು ಪಡೆದು ಬಸ್ಸಿಗೆ ಹತ್ತಿದೆವು.ನಂತರ ನಾವು ಉಳ್ಳಾಳ ದರ್ಗಕ್ಕೆ ಹೋದೆವು.ಅಲ್ಲಿ ಮೀನಿನ ಕೊಳ ಇತ್ತು.ಅದನ್ನು ನೋಡಿ ನಾವೆಲ್ಲರೂ ಇಡ್ಲಿ ಮತ್ತು ಚಹಾವನ್ನು ಸೇವಿಸಿದೆವು. ನಂತರ ನಾವೆಲ್ಲರು ಹಾಲಿನ ಫ್ಯಾ ಕ್ಟರಿಗೆ ಹೋದೆವು. ಅಲ್ಲಿ ಹಾಲನ್ನು ಹೇಗೆ ಮೊಸರು ಮಾಡುತ್ತಾರೆ? ಹಾಲಿನಲ್ಲಿ ಪೇಡಾ, ಲಸ್ಸಿ , ತುಪ್ಪ ಮುಂತಾದವುಗಲನ್ನು ಮಾಡಲಿಕ್ಕೆ ಮತ್ತು ಪ್ಯಾಕ್ ಮಾಡಲಿಕ್ಕೆಂದು ಹಲವಾರು ಮಿಶನ್ಗಳು ಇದ್ದವು. ಅಲ್ಲಿಯ ಯಜಮಾನಿ ನಮಗೆಲ್ಲರಿಗೂ ತುಪ್ಪ, ಮೊಸರು ಮೊದಲಾದ ವಸ್ತುಗಳು ಹಾಲಿನಿಂದ ಹೇಗೆ ಉತ್ಪಾದನೆಯಾಗುವುದೆಂದು ವಿವರಿಸುತ್ತಿ ದ್ದರು. ನಂತರ ನಮಗೆಲ್ಲರಿಗೂ ಒಂದೊಂದು ಲಸ್ಸಿಯನ್ನು ಕೊಟ್ಟರು. ನಾವು ಅದನ್ನು

ಕುಡಿದು ಬಸ್ಸಿನಲ್ಲಿ ಕುಳಿತೆವು. ಟೀಚರು ಎಲ್ಲಾ ಮಕ್ಕಳು ಇದ್ದಾರೆಯಾ? ಎಂದು ಎಲ್ಲರ ಹಾಜರನ್ನು ಕರೆದರು. ನಂತರ ನಾವು ಮೃಗಾಲಯಕ್ಕೆ ಭೇಟಿ ನೀಡಿದವು. ಅಲ್ಲಿ ವಿವಿಧ ತರದ ಹಾವುಗಳು, ಕಾಡು ಬೆಕ್ಕುಗಳು, ನವಿಲು, ಆಮೆಗಳು, ಹುಲಿ,ಸಿಂಹ, ಮೊಸಳೆಗಳು, ಹಿಪ್ಪೊಪೊಟಾಮಸ್, ಓಸ್ಟ್ರಿಟಚ್ ಗಳು, ಕಾಡುಕೋಣಗಳು, ಮಂಗಗಳು, ಪಕ್ಷಿಗಳು, ಕೋಳಿಗಳು ಮತ್ತು ಬಾತುಕೋಳಿಗಳು ಇದ್ದವು. ಇದನ್ನೆಲ್ಲ ಕಂಡು ನಮಗೆಲ್ಲರಿಗೂ ಅಚ್ಚರಿಯಾಯಿತ್ತು. ನಂತರ ನಾವು ಬಸ್ಸಿನಲ್ಲಿ ಕುಳಿತು ಹಳೆಯ ವಸ್ತುಸಂಗ್ರಹಾಲಯಕ್ಕೆ ಹೋದೆವು. ಅಲ್ಲಿ ಹಿಂದಿನ ಕಾಲದಲ್ಲಿ ಉಪಯೋಗಿಸುತ್ತಿದ್ದ ವಸ್ತುಗಳು ಇದ್ದುವು. ಹಿಂದಿನ ಕಾಲದಲ್ಲಿ ಮದುಮಗಳನ್ನು ಕೊಂಡುಹೋಗಲಿಕ್ಕೆಂದಿರುವ ವಸ್ತು ಚಿನ್ನವನ್ನು ಕೆಳಗಿಟ್ಟು ಅದರ ಮೇಲೆ ಮಲಗುವ ಮಂಚ ಹಿಂದಿನ ಕಾಲದಲ್ಲಿತ್ತು.ಭೂತ,ಕಟ್ಟಲಿ

ಕ್ಕೆಂದು ಇರುವ ಹಲವಾರು ಉಪಕರಣ,ಹಳೆಯ ನೊಗನೇಗಿಲು, ಅರೆಯುವ ಕಲ್ಲು,ಚೆನ್ನೆಮಣೆ,ಯಕ್ಷಗಾನದ ಮೂರ್ತಿ,ಕಾಂತಾರನ ಮೂರ್ತಿ,ಹಳೆಯ ಕಾಲದಲ್ಲಿ ಅಕ್ಕಿಯನ್ನು ಸಂರಕ್ಷಿಸಲು ಉಪ ಯೋಗಿಸುತ್ತಿದ್ದ ಬುಟ್ಟಿಗಳು,ಮಣ್ಣಿನಿಂದ ಮಾಡಿದ ಮಡಿಕೆಗಳು, ಸಣ್ಣ ಮಕ್ಕಳ ತೊಟ್ಟಿಲು,ಜಾನಪದ ಮೂರ್ತಿ ಮೊದಲಾದ ವಸ್ತುಗ ಳನ್ನು ಅಚ್ಚುಕಟ್ಟಾಗಿ ಇರಿಸಿದ್ದರು.ಆ ಸ್ಥಳದಲ್ಲಿ ಕಾಂತಾರದ ಮೊದಲ ನೆಯ ಮೂವಿ ಮಾಡಿದ್ದು ಎಂದು ಅಲ್ಲಿಯವರು ಹೇಳಿದರು. ನಂತರ ನಾವೆಲ್ಲರೂ ಮಣ್ಣಿನಿಂದ ತಯಾರಿಸಿದ ಹಲವು ಗಣಪತಿಗ ಳ ಮೂರ್ತಿಗಳನ್ನು ನೋಡಿದೆವು.ಹಿಂದಿನ ಕಾಲದಲ್ಲಿ ಎತ್ತುಗಳಿಂ ದ ಎಣ್ಣೆಯನ್ನು ಮಾಡುವ ಉಪಕರಣಗಳಿದ್ದುವು.ನಂತರ ನಾವೆಲ್ಲ

ರೂ ಅವಲಕ್ಕಿ ಮಾಡುವ ಉಪಕರಣದ ಹತ್ತಿರ ಹೋದೆವು.ಅದನ್ನು ನೋಡಿದಾಗ ನಮಗೆ ಬಹಳ ಖುಷಿಯಾಯಿತು.ಅದೇ ರೀತಿ ರೇಷ್ಮೆನೂಲಿನಿಂದ ಹೊಲಿಗೆ ಮಾಡುವ ಉಪಕರಣ ಇತ್ತು.ಮಾತ್ರವಲ್ಲ,ನಾವು ಮರದಿಂದ ಹತ್ತಿಯನ್ನು ಹೇಗೆ ಮಾಡುವುದೆಂದು ನೋಡಿದೆವು.ನಂತರ ನಾವು ಅಲ್ಲೇ ಹತ್ತಿರವಿದ್ದ ಮರದಡಿಯಲ್ಲಿ ಕುಳಿತು ಊಟ ಮಾಡಿದೆವು.ನಂತರ ನಾವೆಲ್ಲರೂ ತ್ರೀಡಿಗೆ ಹೋದೆವು.ಅಲ್ಲಿ ಕೊಟ್ಟ ಕನ್ನಡಕವನ್ನು ಹಾಕಿದೆವು.ಮೊದಲು ನಾವು ಕನ್ನಡಕವನ್ನು ಹೇಗೆ ಹಾಕಬೇಕು ಹೇಗೆ ಹಾಕಬಾರದು ಎಂದು ಹೇಳಿಕೊಡುತ್ತಿದರು. ಮೂವಿ ಶುರುವಾಯಿತು. ಮೊದಲು ನನಗೆ ಭಯ ಹುಟ್ಟಿಸುವಂತೆ ಬರುತ್ತಿರುವ ಮೊಸಳೆ, ನೀರಿನ ಅಲೆಗಳು, ನಮ್ಮನ್ನು ತಿನ್ನಲು ಬರುವ ಹಾವುಗಳು,ನೊಣಗಳು,ಜೀವಿಗಳನ್ನು ಕಂಡು ನಮ್ಮಗೆಲ್ಲರಿಗೂ ಬೆರಗಾಯಿತು. ನಂತರ ನಮಗೆ ಬಾಹ್ಯಾಕಾಶದಲ್ಲಿರುವ ಗ್ರಹಗಳು,ಸೂರ್ಯನ ಕುರಿತು, ಹಾಗೂ ಅಲ್ಲಿರುವ ವಸ್ತುಗಳ ಕುರಿತು ಹೇಳಿದರು.ನಂತರ ನಾವು ಪಿಲಿಕುಳ ವಿಜ್ಞಾನ ಕೇಂದ್ರಕ್ಕೆ ಹೋದೆವು. ಅಲ್ಲಿ ಒಂದು ಬೋಲ್ ಆಂದೋಲನ ಚಲನೆಯ ಹಾಗೆ ಆಚೆ ಈಚೆ ಹೋಗುತ್ತಿತ್ತು. ಅದು ಕೂಡ 'ಭೂಮಿಯ ಒಂದು ಚಲನೆ ' ಒಬ್ಬರು ವ್ಯಕ್ತಿ ವಿವರಿಸಿದರು ನಂತರ ನಾವು ವಿಜ್ಞಾನದ ಜಗತ್ತಿನ ಕೋಣೆ ಹೋದೆವು. ಅಲ್ಲಿ ಹಲವು ಆಟದ ವಸ್ತುಗಳು ಇದ್ದವು. ನಾವು ಒಂದು ಗುಂಡಿಯನ್ನು ಒತ್ತಿದಾಗ ನೀರು ಮೇಲಿನಿಂದ ಕೆಳಗೆ ಸುಳಿಯಂತೆ ಬರುತ್ತಿತ್ತು. ಇದರಿಂದ ನಾವು ಕಲಿತದ್ದೇನೆಂದರೆ 'ದ್ರವದ ಒತ್ತಡ' ಎಂದು.ನಂತರ ಒಂದು ಬೋಲ್ ಬದಿಯಲ್ಲಿ ನಿಶ್ಚಲ ಚಲನೆಯಲ್ಲಿ ನಿಂತಿತ್ತು. ನಂತರ ಒಂದು

ಗುಂಡಿಯನ್ನು ಬತ್ತಿದಾಗ ಅದು ಮೇಲಕ್ಕೆ ಹಾರಾಡುತ್ತಿತ್ತು. ಇದರಿಂದ ನಾವು ಕಲಿತದ್ದೇನೆಂದರೆ 'ವೇಗವಾಗಿ ಚಲಿಸುವ ವಾಯುವಿಗೆ ಒತ್ತಡ ಕಡಿಮೆ' ಹಾಗೆ ಇದು ಬರ್ನೋಲಿಯ ತತ್ವ ಎಂದು ಅರ್ಥವಾಯಿತು. ಅದೇ ರೀತಿ ಒಂದು ಪಟ್ಟಿಕಿ ಇತ್ತು. ನಾವು ಒಂದು ಗುಂಡಿಯನ್ನು ಒತ್ತಿದಾಗ ಅದರಿಂದ ಏಳು ಬೆಳಕಿನ ಬಣ್ಣಗಳು ಕಾಣುತ್ತಿದ್ದವು. ಇದರಿಂದ ನಾವು ಕಲಿತದ್ದೇನೆಂದರೆ 'ಬೆಳಕು ಅದರ ಘಟಕ ಬಣ್ಣಗಳಾಗಿ ಬದಲಾಗುವುದು' ನಂತರ ನಾವು ಒಂದು ಜೀವಿಯ ಚಿತ್ರ ನೋಡಿದೆವು. ಅದರಲ್ಲಿ ಚಿಟ್ಟೆಯು ಹೇಗೆ ಜನಿಸುವುದೆಂದು ಇತ್ತು. ಇದರಿಂದ ನಾವು ಕಲಿತದ್ದೇನೆಂದರೆ. ಚಿಟ್ಟೆಯು ಮೊಟ್ಟೆಹಿಂದ ಲಾರ್ವ. ಲಾರ್ವದಿಂದ ಪ್ಯೂಪ ನಂತರ ಚಿಟ್ಟೆಯಾಗುವುದು. ನಂತರ ನಾವು ಪಾರ್ಕಿನಲ್ಲಿ ಆಟ ಆಡಿದೆವು. ಸ್ವಲ್ಪ ಹೊತ್ತು ಕಳೆದಾಗ ನಾವು ಬಸ್ಸು ಹತ್ತಿದೆವು. ಬಸ್ಸಿನಲ್ಲಿ ಡೇನ್ಸ್ ಮಾಡುತ್ತಾ ಹಾಡು ಹೇಳುತ್ತಾ ಇದ್ದೆವು. ನಂತರ ನಾವೆಲ್ಲರೂ ಬೀಚಿಗೆ ತಲುಪಿದೆವು. ಅಲ್ಲಿ ನಾವು ಜೈ ಶ್ರೀರಾಮ್ ಎಂದು ಬರೆದಾಗ ಅಲೆಗಳು ಹೆಸರನ್ನು ಸರಸರನೆ ಹಿಂದಕ್ಕೆ ಎಲೆಹಿತು. ನಂತರ ನಾವೆಲ್ಲರು ಐಸನ್ ವಾಟರ್ ಆಟ ಆಡಿದೆವು. ತುಂಬಾ ಹೊತ್ತಾದ ನಂತರ ಬಸ್ಸಿಗೆ ಹತ್ತಿದೆವು. ನಂತರ ಬಸ್ಸಿನಲ್ಲಿ ನಮಗೆಲ್ಲರಿಗೂ ಐಸ್ ಕ್ರೀಮ್ ಕೊಟ್ಟರು. ಡೇನ್ಸ್ ಮಾಡುತ್ತಾ ಆಟ ಆಡಿದೆವು. ನಂತರ ಎಲ್ಲಾ ಮಕ್ಕಳನ್ನು ಅಧ್ಯಾಪಕರು ತಮ್ಮ ತಮ್ಮ ಮನೆಗೆ ಬಿಟ್ಟರು.

-ವೈಷ್ಣವಿ.ಕೆ

# ಮಲತಾಯಿಯ ಹಿಂಸೆ



‘ ಆ...ಹೊಡಿಬೇಡಮ್ಮ,ಹೊಡಿಬೇಡಮ್ಮ ‘ಎಂದು ೭ಯೇ ಪ್ರಾಯವಿರುವ ಜನನಿಯು ಕೂಗುತ್ತಾ ಹೇಳಿದಳು.ಅವಳ ಹೆತ್ತ ತಾಯಿ ತೀರಿ ೨ ವರ್ಷವಾಯಿತು.ಜನನಿಯನ್ನು ಸಾಕಲು ಯಾರೂವಿಲ್ಲವೆಂದು ಅವಳ ತಂದೆ ಪುನರ್ವಿವಾಹವಾದರು.ಮಲತಾಯಿಯು ಜನನಿಯನ್ನು ಚೆನ್ನಾಗಿ ನೋಡಿಕ್ಕೊಳ್ಳುತ್ತಿರಲಿಲ್ಲ.ಅವಳಿಗೆ ಏನಾದರೊಂದು ತೊಂದರೆಕೊಡುತ್ತಿದ್ದಳು.‘ ಬೇಗ ಹೋಗಿ ಎಲ್ಲರ ಬಟ್ಟೆ ತೊಳಿ ‘ ಎಂದು ಮಲತಾಯಿ ಗದರಿಸಿಕ್ಕೊಳ್ಳುವಾಗ ಬೇರೆ ಯಾವ ದಾರಿಯೂ ತೋಚದೆ ಅವಳಿಗದು ಮಾಡಬೇಕಾಗಿಬರುತ್ತಿತ್ತು.ಅವಳ ತಂದೆಗೆ ಈ ವಿಷಯ ತಿಳದಿರಲಿಲ್ಲ.ತಂದೆಗೆ ವಿಚಾರ ತಿಳಿಸಲು ಶ್ರಮಿಸಿದರೆ ಮಲತಾಯಿಯು ಅವಳನ್ನು ಹಿಂಸಿಸುತ್ತಿದ್ದಳ್ಳು.

ಒಂದು ದಿನ ಜನನಿಯ ತಂದೆ ಕೆಲಸಕ್ಕೆ ಹೋದಾಗ ಎಂದಿನಂತೆ ಮಲತಾಯಿಯು ಅವಳನ್ನು ನಿರ್ಬಂಧಿತವಾಗಿ ಕೆಲಸ ಮಾಡಿಸುತ್ತಿದ್ದಳು.ಅಂದು ಅವಳಿಗೆ ಬೇಗನೇ ಶಾಲೆಗೆ ತಲುಪಬೇಕಾಗಿದ್ದರೂ ತಡವಾಗಿಯೇ ಶಾಲೆಗೆ ತಲುಪಿದಳು.ಶಾಲೆ ಪ್ರಾರಂಭವಾಗಿತ್ತು.ತರಗತಿಗಳಲ್ಲಿ ಪಾಠಗಳು ಜರಗುತ್ತಿದ್ದುವು.ತಡವಾಗಿ ಬಂದ ಜನನಿಯನ್ನು ಕಂಡ ಅಧ್ಯಾಪಕಿಯೂ ಸಿಟ್ಟುಗೊಂಡು ‘ ಇನ್ನ್ಯಾಕೆ ನೀನು ಬಂದೆ ? ತೊಲಗಾಚೆ ಮೂರ್ಖ ‘ ಎಂದು ಗದರಿಸಿದರು.ದಿನವಿಡೀ ಅವಳಿಗೆ ಜಗಲಿಯಲ್ಲಿ ನಿಲ್ಲಬೇಕಾಗಿಬಂತು.ದಿವಸವೂ ಅವಳು ತಡವಾಗಿ ಬರುವುದರಿಂದ ಇದು ಹೀಗೇನೆ ಮಂದುವರಿಯುತ್ತಿತ್ತು.

ಮಾರನೇ ದಿನ ಅಧ್ಯಾಪಕಿಯೂ ಜನನಿಯ ತಂದೆಗೆ ಕರೆ ಮಾಡಿದರು." ಹಲೋ,ನೀವು ಜನನಿಯ ತಂದೆಯಲ್ಲವೇ ?" ಎಂಬ ಅಧ್ಯಾಪಕಿಯ ಪಶ್ನೆಗೆ ಜನನಿಯ ತಂದೆಯೂ " ಹಾ, ಹೌದು ಏನು ವಿಷಯ ಟೀಚರೇ " ಎಂದು ಮರು ಪ್ರಶ್ನಿಸಿದರು.ಆಗ ಅಧ್ಯಾಪಕಿಯೂ " ನಿಮ್ಮ ಮಗಳು ಪ್ರತೀದಿವಸ ಶಾಲೆಗೆ ತಡವಾಗಿಯೇ ಬರುವುದು.ಇನ್ನೂ ಇದು ಮುಂದುವರಿದರೆ ಮನೆಗೆ ಹಿಂತಿರುಗಿಸುವೆನೆಂದೂ " ಹೇಳಿದರು.ಅಗ ಅವಳ ತಂದೆಯೂ "ಈಯೆಲ್ಲಾ ಸಮಾಚಾರ ತಾನು ತಿಳಿದಿಲ್ಲವೆಂದೂ ಇನ್ನು ಮುಂದೆ ಸಮಯಕ್ಕೆ ಸರಿಯಾಗಿ ಕಳುಹಿಸುವೆನೆಂದೂ " ಹೇಳಿ ಮಾತು ಮುಗಿಸಿದರು.ಈ ಕಾರಣದಿಂದ ಜನನಿಯ ತಂದೆಗೆ ಅವಳ ಮಲತಾಯಿಯ ಮೇಲೆ ಅನುಮಾನ ಉಂಟಾಯಿತು.ಆದ್ದರಿಂದ ತಾನಿಂದು ಕಛೇರಿಗೆ ಹೋಗುವುದಿಲ್ಲವೆಂದೂ ಅವರಿಬ್ಬರೊಳಗಿನ ಒಡನಾಟವನ್ನು ನಿರೀಕ್ಷಿಸಿಸುವೆನೆಂದೂ ನಿರ್ಧರಿಸಿದನು.ಮರುದಿವಸ ಅವನು ಕಛೇರಿಗೆ ತೆರಳುವವನಂತೆ ನಟಿಸಿದನು.ತನ್ನ ಗಂಡ ಕೆಲಸಕ್ಕೆ ಹೋದನೆಂದು ಭಾವಿಸಿ ಮಲತಾಯಿಯೂ ಜನನಿಯನ್ನು ಕೆಲಸದ ಒತ್ತಡತ್ತ ಬಡಿಯುತ್ತಾ ಸಾಗಿಸಿದಳು.ಇದನ್ನು ಕಂಡು ಸಿಟ್ಟನ್ನು ತಾಳಲಾರದೆ ಅವಳ ತಂದೆಯೂ " ಲೇ.. ಈ ಎಲೇ ಕಂದನನ್ನು ಇಷ್ಟು ಕ್ರೂರವಾಗಿ ದುಡಿಸುತ್ತೀಯಲ್ಲಾ.ನಾಚಿಕಾಗಲ್ವಾ ?" ಎಂದಾಗ " ನಿ...ನೀವು ಯಾವಾಗ ಬಂದದ್ದು! ಇ...ಇಷ್ಟು ಬೇಗ ಕಲಸ ಬಟ್ಟಿತಾ!" ಎಂದು ನುಡಿದಳು. " ಓ..ಹೋ ನಾಟಕ ಗಂಭೀರ.ಇನ್ನು ಒಂದೇ ಒಂದು ನಿಮಿಷ ನಿಲ್ಲಬಾರದೆಂದು " ಹೇಳಿ ಮನೆಯಿಂದ ತಳ್ಳಿ ಹೊರಹಾಕಿದರು.ಆಗ ಜನನಿಗೆ ಬೇಸರವಾಯಿತು."ಅಪ್ಪಾ , ಅಮ್ಮನನ್ನು ಕ್ಷಮಿಸಿ,ಇವರು ಈ ಮನೆಯಲ್ಲೇ ಇರಲಿ" ಎಂದು ಮಗಳು ಹೇಳದಾಗ, ತಂದೆಯೂ " ನನ್ನ ಮಗಳು ಹೇಳಿದ್ದಕ್ಕೆ ಒಪ್ಪಕ್ಕೊಳ್ಳುತ್ತೇನೆಂದು " ಹೇಳದರು.ಮಲತಾಯಿಗೆ ಸಂತೋಷವಾಯಿತು.

ಇನ್ನು ಮುಂದೆ ಹೀಗೆ ಮಾಡಲಾರನೆಂದು ಗಂಡನಿಗೆ ಮಾತು ಕೊಟ್ಟು ಸುಖವಾಗಿ ಜೀವನ ಮುಂದುವರಿಸಿದರು.

ವೈಷ್ಣವಿ
2 ನೇ ತರಗತಿ

" ತೃಪ್ತಿ ಆಟ ಆಡಬೇಡ.ಯು.ಎಸ್.ಎಸ್ ಗೆ ಕಲಿ " ಎಂದು ವೈಶಾಲಿ ಅಮ್ಮ ಹೇಳಿದರು.ತ್ರಿಪ್ತಿ ೭ನೇ ತರಗತಿ.ಅವಳ ಅಮ್ಮ ದಿನಾಲು ಕಷ್ಟಪಟ್ಟು ದುಡಿದು ಅವಳನ್ನು ಓದಿಸುತ್ತಿದ್ದರು.ಓದಲು ಹೇಳದಾಗಲೆಲ್ಲಾ ಅವಳು " ನಾಳೆ ಬೆಳಗ್ಗೆ ಓದುತ್ತೇನಮ್ಮಾ.ಬೆಳಗ್ಗೆ ಓದಿದರೆ ಬೇಗನೇ ಅರ್ಥಾದೀತು " ಎನ್ನುತ್ತಿದ್ದಳು.

ಒಂದು ದಿನ ವಿಜ್ಞಾನ ಅಧ್ಯಾಪಕಿಯು ವಿದ್ಯಾರ್ಥಿಗಳಲ್ಲಿ " ಮಕ್ಕಳೇ ಈ ಬಾರಿ ನಮ್ಮ ಶಾಲೆಯಿಂದ ೧೦ ವಿದ್ಯಾರ್ಥಿಗಳು ಯ.ಎಸ್.ಎಸ್ ಪರೀಕ್ಷೆ ಬರೆಯಲಿರುವರು.ಯಾವ ಮಕ್ಕಳು ಉತ್ತೀರ್ಣರಾಗುತ್ತಾರೊ ಅವರಿಗೆ ನಾನು ಉತ್ತಮ ಬಹುಮಾನವನ್ನು ಕೊಡುತ್ತೇನೆ " ಎಂದಾಗ ತ್ರಿಪ್ತಿಯು ಮನಸ್ಸಿನಲ್ಲಿ ನಾನು ಖಂಡಿತವಾಗಿಯೂ ಪಾಸಾಗುವೆನು.ಅಮ್ಮ ನನಗೋಸ್ಕರ ಹಗಲಿರುಳೆನ್ನದೆ ದುಡಿಯುತ್ತಾಳೆ.ಅದಲ್ಲದೆ ಅಧ್ಯಾಪಕಿಯವರು ಸಂಜೆಯೂ ನಮಗಾಗಿ ಹೆಚ್ಚು ತರಬೇತಿಗಳನ್ನು ನೀಡುತ್ತಾರೆ.ದೇವರೆ ನನ್ನನ್ನು ಪಾಸಾಗಿಸು ಎಂದು ನೆನೆದಳು.ತ್ರಿಪ್ತಿ ಮನೆಗೆ ಹಿಂತಿರುಗಿ ಬಂದಾಕ್ಷಣವೇ ಓದಲು ಪ್ರಾರಂಭಿಸಿದಳು.ಇದನ್ನು ಕಂಡ ಅವಳ ತಾಯಿಗೆ ಬಹಳ ಸಂತೋಷವಾಯಿತು.ಯ.ಎಸ್.ಎಸ್ ಪರೀಕ್ಷೆಯ ದಿನ ಬಂದಿತು.ಆ ೧೦ ವಿದ್ಯಾರ್ಥಿಗಳನ್ನು ಅದ್ಯಾಪಕಿ ಸ್ಪರ್ಧಾಪರೀಕ್ಷಾ ಸ್ಥಳಕ್ಕೆ ತಲುಪಿಸಿದರು.ಸಮಾಧಾನದ ಮಾತುಗಳನ್ನಾಡಿ ಅಧ್ಯಾಪಕಿಯೂ ಮಕ್ಕಳೆಲ್ಲರನ್ನು ಪರೀಕ್ಷಾ ಕೋಣೆಯೊಳಗೆ ಕೂರಿಸಿದರು.ಎಲ್ಲರೂ ಪರೀಕ್ಷೆ ಬರೆಯತೊಡಗಿದರು.ಭಯವೋ,ಆತಂಕವೋ ಇಲ್ಲದೆ ತ್ರಿಪ್ತಿಯೂ ಪರೀಕ್ಷೆಯನ್ನು ಬರೆದು ಮುಗಿಸಿದಳು.ಅನಂತರ ಅಧ್ಯಾಪಕಿಯೂ ಎಲ್ಲಾ ಮಕ್ಕಳನ್ನು ತಮ್ಮ ತಮ್ಮ ಮನೆಗೆ ತಲುಪಿಸಿದರು.

ದಿನಗಳುರುಳಿದವು .ಎಂದಿನಂತೆ ತ್ರಿಪ್ತಿಯೂ ಶಾಲೆಗೆ ಹೋದಳು.ಸ್ವಲ್ಪ ಸಮಯದ ಬಳಿಕ ಅಧ್ಯಾಪಕಿಯೂ ಅವಳ ಬಳಿಗೆ ಬಂದು ಕಂಗ್ರಾಜ್ಯುಲೇಶನ್ ತ್ರಿಪ್ತಿ ಎಂದರು.ವಿಷಯ ತಿಳಿಯದೆ ಸ್ತಂಭಿತವಾಗಿದ್ದ ಅವಳಲ್ಲಿ ಅಧ್ಯಾಪಕಿಯು ನೀನು ಯು.ಎಸ್.ಎಸ್ ಪರೀಕ್ಷೆಯ ವಿಜಯಿಗಳಲ್ಲಿ ಒಬ್ಬಳು ಎಂದಾಗ ಅವಳಿಗೆ ಎಲ್ಲಿಲ್ಲದ ಖುಷಿ.ಸಂತೋಷದಿಂದ ಅವಳು ತನ್ನ ಗೆಳೆತಿಯನ್ನು ಅಪ್ಪಿ ಹಿಡಿದಳು.ವಿಷಯ ತಿಳಿದ ತಾಯಿ ವೈಶಾಲಯೂ ಮಗಳಿಗೆ ಇಷ್ಟವಾದ ಪಾಯಸ ಮಾಡಿಟ್ಟರು.ತಾಯಿಯ ಆನಂದವನ್ನರಿತ ತ್ರಿಪ್ತಿಗೆ ಉತ್ಸಾಹವಾಯಿತು.ಅವಳಮ್ಮ ಅವಳನ್ನು ತಬ್ಬಿಕ್ಕೊಂಡರು.

ವೈಷ್ಣವಿ
೭ನೇ ತರಗತಿ

# ಕನಸು




"ಅಯ್ಯೋ! ಇದೇನು ಮಾಡಿ ಬಿಟ್ಟೆ ? ನಾನು ತಪ್ಪಿ ಆ ಪೇಪರನ್ನು ಹರಿದು ಬಿಟ್ಟೆ. ನಿನ್ನಿಂದ ಮಾಡಿದ ಫೈಲನ್ನು ಇನ್ನೊಮ್ಮೆ ಮಾಡಬೇಕಾಯಿತಲ್ಲ. ನನಗೆ ಸಮಯವಿಲ್ಲ. ಇದನ್ನು ನಾನು ಹತ್ತು ಗಂಟೆಗೆ ತೆಗೆದುಕೊಂಡು ಸರ್ ನ ಕೈಗೆ ತಲುಪಿಸಬೇಕಲ್ಲ ಈಗ ಸಮಯ 9:30 ನಾನು ಈಗ ಏನು ಮಾಡಲಿ ನನ್ನ ಕನಸನ್ನು ನೀನು ಒಂದು ಸೆಕೆಂಡಿನಲ್ಲಿ ನುಚ್ಚುನೂರಾಗಿ ಮಾಡಿದೆ " ಎಂದು ರೇಖಾ ಹೇಳಿದಳು.

ಆಗ ರೇಖಾಳ ತಂಗಿ ರಿಯಾಳು " ಇದನ್ನು ನಾನು ಮಾಡಿ ಕೊಡುತ್ತೇನೆ " ಎಂದು ಹೇಳಿದಾಗ ರೇಖಾಳು " ನಮ್ಮಲ್ಲಿ ಸಮಯ ತುಂಬಾ ಕಡಿಮೆಯಿದೆ " ಎಂದು ಹೇಳಿದಳು.ಆಗ ರೇಖಾಳು ತುಂಬಾ ಅವಸರದಿಂದ ಸರ್ಗೆ ಹೇಗಾದರು ಪೇಪರನ್ನು ಮಾಡಿಕೊಡಳು ಹೋದಳು.ಸ್ವಲ್ಪ ಸಮಯದ ಬಳಿಕ ರೇಖಾಳಿಗೆ ಬಸ್ಸು ತಪ್ಪಿ ಹೋಯಿತು.ಅವಳಿಗೆ ಏನು ಮಾಡಬೇಕೆಂದು ತೋಚಲಿಲ್ಲ.ಅಲ್ಲಿಯೇ ಬರುತ್ತಿದ್ದ ರಿಕ್ಷವನ್ನು ನಿಲ್ಲಿಸಿ " ನನ್ನನ್ನ ಕಛೇರಿಗೆ ಬಿಡುತ್ತೀರ " ಎಂದು ಕೇಳಿದಳು.ಅವರು " ಹಾ " ಎಂದು ಹೇಳಿದರು.ಸ್ವಲ್ಪ ಸಮಯದ ಬಳಿಕ ಕಛೇರಿಗೆ ತಲುಪಿದಳು.ಆ ಕಛೇರಿಯ ಮೇನೇಜರ್ " ಅಲ್ಲಿ ನಿಲ್ಲು " ಎಂದು ಹೇಳಿದರು." ಇದು ಕಛೇರಿಗೆ ಬರುವ ಸಮಯವೋ ಎಂದೂ ನೀನು ಮನೆಗೆ ಹೋಗು " ಎಂದು ಕೋಪದಿಂದ ಹೇಳಿದರು. ಆಗ ರೇಖಾಳು "ಸರ್ ನಾನು ಫೈಲನ್ನು ಮುಗಿಸಿ ತಂದಿದ್ದೇನೆ. ನೀವು ಈಗ ಈ ಫೈಲನ್ನು ತೆಗೆದುಕೊಳ್ಳಿ . ದಯಮಾಡಿ ಸರ್ "ಎಂದಾಗ ಸರ್ " ಸರಿ ಕೊಡು,ನೀನು ಮಾಡಿದ ಫೈಲನ್ನು ನಾನು ತೆಗೆದು ಕೊಳ್ಳುತ್ತೇನೆ ".

ಮರುದಿನ ರೇಖಾಳು ಕಛೇರಿಗೆ ಬಂದಳು. ಸರ್ ಬಂದು ಕೇಳಿದರು, "ಆ ಫೈಲನ್ನು ನೀನೇ ಮಾಡಿದ್ದಾ?" ಆಗ ರೆಖಾಳು "ಹೌದು ಸರ್ ನಾನೇ ಮಾಡಿದ್ದು "ಎಂದಳು.ಆಗ ಸರ್ " ನೀನು ಈ ಫೈಲನ್ನು ಮಾಡಿದ ಕಾರಣ ನಮಗೆ ಒಂದು ಕೋಟಿ ರೂಪಯಿ ದೊರಕಿತು. ಆದ ಕಾರಣ ನಾನು ನನ್ನ ಹಲವು ಕಛೇರಿಗಳಲ್ಲೊಂದನ್ನು ನಿನಗೆ ಹಸ್ತಾಂತರಿಸಲು ತೀರ್ಮಾನಿಸಿದ್ದೇನೆ " ಎಂದರು. ಸರ್ ನ ಈ ಮಾತುಗಳನ್ನು ನಂಬಲಾಗದೆ ಅವಳ ಪ್ರಜ್ಞೆ ಹೋಯಿತು. ಅನಂತರ ಅವಳ ಕನಸು ನನಸಾದ ಆನಂದದಲ್ಲಿ ಅವಳು ಬಡವರಿಗೆ ಸಹಾಯ ಮಾಡಿದಳು.

ಹರ್ಷಿತ
೯ನೇ ತರಗತಿ

# ಮನಸ್ಸಿದ್ದರೆ ಮಾರ್ಗ




‘ಲಿಲ್ಲಿ,ಯಾವಾಗಲೂ ಯಾಕೆ ನೀನು ಫುಟ್ಬಾಲ್ ಆಟ ಆಡುತ್ತೀ. ಬೇರೆ ಆಟ ಯಾಕೆ ಆಡಲ್ಲ‘ಎಂದು ಲಿಲ್ಲಿಯ ಅಮ್ಮ ಹೇಳಿದರು. ‘ಫುಟ್ಬಾಲ್ ಎಂದರೆ ನನ್ನ ಜೀವ ಅಮ್ಮ ಅದಿಲ್ಲದಿದ್ದರೆ ನಾನು ಇರಲ್ಲ‘ಎಂದು ಲಿಲ್ಲಿ ಹೇಳಿದಳು.ಲಿಲ್ಲಿ ಎಲ್ಲಾ ಆಟೋಟ ಸ್ಪರ್ಧೆಗಳಲ್ಲಿ ಯಾವಾಗಲೂ ಪ್ರಥಮ ಸ್ಥಾನವನ್ನು ಪಡೆಯುತ್ತಿದ್ದಳು.ಅವಳು ಶಾಲೆಯಲ್ಲಿ ಫುಟ್ಬಾಲ್ ಆಟದ ಕ್ಯಾಪ್ಟನ್ ಆಗಿದ್ದಳು.

ಹೀಗೆ ಒಂದು ದಿನ ಶಾಲೆಯಲ್ಲಿ ಫುಟ್ಬಾಲ್ ಕೋಚ್ ಬಂದರು.ಅವರ ಹೆಸರು ರೋಕಿ ಎಂದಾಗಿತ್ತು.ಅವರು ಆ ಶಾಲೆಯಲ್ಲಿದ್ದ ಎಲ್ಲಾ ಮಕ್ಕಳನ್ನು ಪರೀಕ್ಷೆ ಮಾಡಲೆಂದು 2ಗುಂಪುಗಳನ್ನಾಗಿ ಮಾಡಿ ಫುಟ್ಬಾಲ್ ಆಟ ಆಡಿಸಿದರು.ಅದರಲ್ಲಿ ಲಿಲ್ಲಿಯ ತಂಡವು ವಿಜಯಗಳಿಸಿತು.ಆಗ ರೋಕಿ ಕೋಚ್‘ಲಿಲ್ಲಿ ನೀನು ಮತ್ತು ನಿನ್ನ ತಂಡದ ಗೆಳತಿಯರು ತುಂಬಾ ಚೆನ್ನಾಗಿ ಆಟ ಆಡಿದ್ದೀರಿ. ವೆರಿಗುಡ್.ಹೀಗೆ ಮುಂದುವರಿದರೆ ನಿನ್ನನ್ನು ಮತ್ತು ನಿನ್ನ ಗೆಳತಿ

ಯರನ್ನು ರಾಜ್ಯ ಫುಟ್ಬಾಲ್ ಮಟ್ಟಕ್ಕೆ ಕೊಂಡೊಯ್ಯುತ್ತೇವೆ'ಎಂದರು.ಲಿಲ್ಲಿಗೆ ಮತ್ತು ಅವಳ ಗೆಳತಿಯರಿಗೆ ಬಹಳ ಸಂತೋಷವಾಯಿತು.

ಹೀಗೆ ಹಲವು ದಿವಸಗಳು ಕಳೆದವು.ಒಂದು ದಿನ ಲಿಲ್ಲಿ ಮತ್ತು ಅವಳ ಗುಂಪಿನವರು ಜೊತೆಯಾಗಿ ಫುಟ್ಬಾಲ್ ಆಟ ಆಡುತ್ತಿದ್ದರು.ಹೀಗೆ ಆಟ ಆಡುತ್ತಿರುವಾಗ ಒಬ್ಬ ಹುಡುಗ ಅವನ ಬೈಕಿನಿಂದ ಹಾರ್ನ್ ಹಾಕುತ್ತಾ ತೊಂದರೆ ಕೊಡುತ್ತಿದ್ದನು.ಗುಂಪಿನಲ್ಲಿದ್ದ ಲಿಲ್ಲಿ ಅದನ್ನು ಗಮನಿಸಿ ಅವನ ಹತ್ತಿರಕ್ಕೆ ಹೋದಳು.'ಏ,ನಿನಗೆ ಬುದ್ಧಿ ಇಲ್ವಾ ಯಾಕೆ ಈ ಬೈಕಿನಿಂದ ಹಾರ್ನ್ ಹಾಕುತ್ತಾ ನಮಗೆ ತೊಂದರೆ ಕೊಡುತ್ತೀ'ಎಂದು ಕೇಳಿದಳು.

ಆಗ ಆ ಹುಡುಗ'ನೀವು ಫುಟ್ಬಾಲ್ ಯಾಕೆ ಆಡುತ್ತೀರಿ.ನನಗೆ ಇಲ್ಲಿ ಫುಟ್ಬಾಲ್ ಆಟಆಡುವುದು ಇಷ್ಟವಿಲ್ಲ'ಎನ್ನುತ್ತಾನೆ.ಆಗ'ಲಿಲ್ಲಿ ನಿನಗೆ ಇಷ್ಟವಿಲ್ಲದಿದ್ದರೆ ಬೇರೆ ಕಡೆಗೆ ಹೋಗು.ಇಲ್ಲಿ ನಿಂತು ಯಾಕೆ ತೊಂದರೆ ಕೊಡುತ್ತೀ?ಫುಟ್ಬಾಲ್ ಅಂದರೆ ನಮ್ಮೆಲ್ಲರ ಜೀವ.ನಾವು ಯಾವತ್ತೂ ಅದನ್ನು ಬಿಟ್ಟುಕೊಡಲ್ಲ'ಎನ್ನುತ್ತಾಳೆ.ಅವನಿಗೆ ಬಹಳ ಕೋಪ ಬರುತ್ತದೆ.ಅವನು ಅವನ ಕಿಸೆಯಿಂದ ಆಸಿಡ್ ನ ಬೋಲನ್ನು ತೆಗೆದು ಅವಳ ಮುಖಕ್ಕೆ ಬಿಸಾಡುತ್ತಾನೆ.ಅವಳ ಅರ್ಧಮುಖ ಸುಟ್ಟು ಹೋಗುತ್ತದೆ.ಇದನ್ನು ಕಂಡ ಅವಳ ಗೆಳತಿಯರಾದಶೀಲಾ,ಮೀನಾ,ಆಯಿಷ,ನಂತುನ,ರಾಧ,ಲಲಿತ,ಲಕ್ಷ್ಮಿ ಹಾಗೂ ಉಳಿದ ಗೆಳತಿಯರು ಹತ್ತಿರ ಬಂದರು.ಅವಳನ್ನು ಎತ್ತಿಕೊಂಡು ಆಸ್ಪತ್ರೆಗೆ ಸಾಗಿಸುತ್ತಾರೆ.ಸ್ವಲ್ಪ ದಿನದಲ್ಲೇ ಅವಳನ್ನು ಮನೆಗೆ ಕೊಂಡುಹೋಗುತ್ತಾರೆ.ಅವಳು ತುಂಬಾ ದಿವಸ ಫುಟ್ಬಾ ಲ್ ಮ್ಯಾಚಿಗೆ

ಬರುವುದಿಲ್ಲ.ಇದನ್ನು ಗಮನಿಸಿದ ಅವಳ ಕೋಚ್ ಅವಳ ಮನೆಗೆ ಹೋಗುತ್ತಾರೆ.ಅವಳು ಬಾಗಿಲು ಮುಚ್ಚಿ ರೂಮಿನಲ್ಲಿ ಕುಳಿತಿರುತ್ತಾಳೆ.ರೋಕಿ ಕೋಚ್ ಬಾಗಿಲಿನಲ್ಲಿ ಕುಳಿತು'ಲಿಲ್ಲಿ,ನಿನಗೆ ಫುಟ್ಬಾಲ್ ಅಂದರೆ ತುಂಬಾ ಇಷ್ಟ ತಾನೇ? ನೋಡುಲಿಲ್ಲಿ,ನಾವು ಜೀವನದಲ್ಲಿ ಯಾವತ್ತೂ ಸೋಲಬಾರದು. ಮುಂದೆಮುಂದೆ ಹೋಗಬೇಕು.ನೋಡು ಲಿಲ್ಲಿ,ನಿನ್ನ ತರ ಒಬ್ಬಳು ಹುಡುಗಿ.ಅವಳಿಗೆ ಕ್ರಿಕೆಟ್ ಅಂದರೆ ತುಂಬಾ ಇಷ್ಟ.ಅವಳು ಯಾ ವಾಗಲೂ ಅದನ್ನೇ ಆಡುತ್ತಿರುತ್ತಾಳೆ.ಒಂದು ದಿನ ಒಬ್ಬರು ಕೋಚ್ ಅವಳನ್ನು ಕ್ರಿಕೆಟ್ ಮ್ಯಾಚಿಗೆ ಕರೆದುಕೊಂಡುಹೋಗುತ್ತಾರೆ.ಅವಳು ಅದರಲ್ಲಿ ಒಳ್ಳೆಯ ಅಂಕಗಳನ್ನು ಪಡೆದು ಗೆಲ್ಲುತ್ತಾಳೆ.ಅದೇ ರೀತಿ ನೀನೂ ಕೂಡಾ ಪ್ರಯತ್ನಪಡು.ನೀನು ಗೆದ್ದೇ ಗೆಲ್ಲುತ್ತೀ.ನೋಡು,ನಿನ್ನ ಗುಂಪಿನ ಗೆಳತಿಯರು ನಿನಗೋಸ್ಕರ ಕಾಯತ್ತಾ ಇದ್ದಾರೆ.ಯಾಕೆಂದರೆ ನೀನು ಫುಟ್ಬಾಲ್ ಚೆನ್ನಾಗಿ ಆಟ ಆಡುತ್ತೀ.ನೀನು ದಯವಿಟ್ಟು ಫುಟ್ಬಾಲ್ ಮ್ಯಾಚಿಗೆಬಾ'ಎಂದು ಹೇಳುತ್ತಾರೆ.

ಮರುದಿವಸ ಅವಳು ಫುಟ್ಬಾಲ್ ಮ್ಯಾಚಿಗೆ ಹೋಗುತ್ತಾಳೆ.ಅವಳ ಗೆಳತಿಯರು ಅವಳನ್ನು ತಬ್ಬಿಕೊಳ್ಳುತ್ತಾರೆ.ಆ ಫುಟ್ಬಾಲ್ ಮ್ಯಾಚಿನಲ್ಲಿ ಅಲ್ಲಿಯ ತಂಡ ಗೆಲ್ಲುತ್ತದೆ.ಇದನ್ನು ಅರಿತ ಸರಕಾರವು ಲಿಲ್ಲಿಗೆ ಮತ್ತು ಅವಳ ತಂಡದವರಿಗೆ 'ಅರ್ಜುನ ಪ್ರಶಸ್ತಿ'ಯನ್ನು ನೀಡುತ್ತಾರೆ.ಅಲ್ಲಿಗೆ ಅವಳು ನೆಮ್ಮದಿಯಿಂದ ಬಾಳುತ್ತಾಳೆ.

ವೈಷ್ಣವಿ

# ಬಿಡುವಿನ ಸದುಪಯೋಗ




'ಸಮಯ ಎಂಬುದು ಹಣಕ್ಕೆ ಸಮಾನ'ಸಮಯವನ್ನು ಎಂದಿಗೂ ವ್ಯರ್ಥ ಮಾಡಬಾರದು.ಒಮ್ಮೆ ಕಳೆದು ಹೋದ ಸಮಯ ಪುನಃ ಬರುವುದಿಲ್ಲ.ನಾವು ನಮ್ಮ ಬಿಡುವಿನ ವೇಳೆಯನ್ನು ಹೇಗೆ ಕಳೆಯುತ್ತೇವೆ ಎನ್ನುವುದಕ್ಕಿಂತಲೂ ಅದನ್ನು ಹೇಗೆ ಸದುಪಯೋಗ ಪಡಿಸುತ್ತೇವೆ ಎಂದು ಆಲೋಚಿಸುವುದು ಹೆಚ್ಚು ಒಳ್ಳೆಯದು.ಯಾಕೆಂದರೆ ಒಬ್ಬ ವ್ಯಕ್ತಿ ತನ್ನ ಬಿಡುವಿನ ವೇಳೆಯನ್ನು ಹೇಗೆ ಕಳೆಯುತ್ತಾನೆಯೋ ಅದರಿಂದ ಅವನು ಎಂಥಾ ವ್ಯಕ್ತಿ ಎಂದು ತಿಳಿಯಬಹುದು.

ತುಂಬಾ ಜನರು,ಬಿಡುವಿನ ವೇಳೆ ಎಂದರೆ ಏನನ್ನೂ ಮಾಡದೆ ಸುಮ್ಮನೆ ಕುಳಿತು ವಿಶ್ರಾಂತಿ ಪಡೆದುಕೊಳ್ಳುವ ಸಮಯ ಎಂದು ಭಾವಿಸುತ್ತಾರೆ.ಸಮಯದ ಬೆಲೆಯನ್ನು ಅರ್ಥಮಾಡಿಕೊ ಳ್ಳದೆ ಸುಮ್ಮನೆ ಕಾಲ ಕಳೆಯುತ್ತಿರುತ್ತಾರೆ.ಹೀಗೆ ಮಾಡದೆ ಯಾವು

ದಾದರೂ ಒಳ್ಳೆಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದು ಒಳ್ಳೆಯದು.ನಮ್ಮ ಬಿಡುವಿನ ವೇಳೆಯನ್ನು ವಿವಿಧ ಹವ್ಯಾಸಗಳಿಗಾಗಿ ಮೀಸಲಿಡಬೇಕು.ಇದರಿಂದ ನಮ್ಮ ಮನಸ್ಸಿಗೆ ತುಂಬಾ ಸಂತೋಷ ಸಿಗುತ್ತದೆ.ಬಿಡುವಿನ ವೇಳೆಯನ್ನು ನಾವು ಸಂತೋಷದಿಂದ ಹಾಗೂ ಆಸಕ್ತಿಯಿಂದ ಉಪಯೋಗಿಸಿಕೊಳ್ಳಬೇಕು.

ನಾವು ನಮ್ಮ ಬಿಡುವಿನ ವೇಳೆಯನ್ನು ಓದುವುದಕ್ಕಾಗಿ ಮೀಸಲಿಟ್ಟರೆ ಅದರಿಂದ ಜ್ಞಾನವನ್ನು ವಿಸ್ತರಿಸಲು ಸಾಧ್ಯ.ಅಲ್ಲದೆ,ಒಬ್ಬ ಒಳ್ಳೆಯ ಓದುಗಾರನಾಗಲೂ ಸಾಧ್ಯ.ನಾವು ನಮ್ಮ ಬಿಡುವಿನ ವೇಳೆಯನ್ನು ಪ್ರಕೃತಿಯ ವೀಕ್ಷಣೆಗಾಗಿ ಮೀಸಲಿಟ್ಟರೆ ಅದರಿಂದ ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ.ಪ್ರಕೃತಿಯನ್ನು ವೀಕ್ಷಿಸುವುದರಿಂದ ಅನೇಕ ರೀತಿಯ ಜ್ಞಾನವನ್ನು ಪಡೆಯಬಹುದು.ಹೀಗೆ ಅನೇಕ ಉತ್ತಮ ಹವ್ಯಾಸಗಳು ನಮ್ಮ ಬಿಡುವಿನ ವೇಳೆಯನ್ನು ಸದುಪಯೋಗಗೊಳಿಸಲು ಸಹಾಯ ಮಾಡುತ್ತದೆ.

'ಸಮಯ'ಎಂಬುದು ಅಮೂಲ್ಯವಾದುದು.ನಮಗೆ ದೊರಕುವ ಉತ್ತಮ ಅವಕಾಶಗಳನ್ನು ಯೋಗ್ಯರೀತಿಯಲ್ಲಿ ಬಳಸಿಕೊಳ್ಳಬೇಕು. ‘ಮುತ್ತು ಹೋದರೆ ಮತ್ತೆ ಬರುವುದು,ಹೊತ್ತು ಕಳೆದರೆ ತಿರುಗಿ ಬರದು‘ಇದನ್ನು ಪ್ರತಿಯೊಬ್ಬರೂ ಅರಿತುಕೊಂಡು ಬಿಡುವಿನ ವೇಳೆಯನ್ನು ಸದುಪಯೋಗ ಮಾಡಿಕೊಳ್ಳಬೇಕು.

-ಫಾತಿಮತ್ ಫರ್ಝ್ಮೀನ. ಎಮ್

# ನೆರಳೆ



ನೆರಳೆ ನೆರಳೆ ನೆರಳೆ
ಓ ನನ್ನ ಆತ್ಮವೇ ನೆರಳೆ
ನಾನು ಎಲ್ಲಿ ಹೋದರು ಬರುವೆ
ನನ್ನ ಸಖನಂತೆ ಇರುವೆ
ನಾನಿಲ್ಲದೆ ನೀನು ಇಲ್ಲ
ನಾನು ಹುಟ್ಟುವಾಗ ನೀನು ಹುಟ್ಟುವೆ
ನನ್ನ ಬಾಲದಂತೆ ಹಿಂದೆಯೇ ಬರುವೆ
ನನ್ನನ್ನು ಬಿಟ್ಟು ನೀನು ಇರಲಾರೆ
ನೀನೊಂದು ಚಾಯೆ
ನೀನೊಂದು ಮಾಯೆ
ನನ್ನೊಂದಿಗೆ ಯಾರು ಇಲ್ಲದಿದ್ದರೆ ಏನು
ನೀನು ಇರುವೆ ನನಗಾಗಿ
ಗಿಡ ಮರ, ಬಳ್ಳಿಗಳ ಜೊತೆಯಲ್ಲಿ ನೀನಿರುವೆ
ನೆರಳೆ ನೆರಳೆ ನೆರಳೆ
ಓ ನನ್ನ ಆತ್ಮವೇ ನೆರಳೆ

-ಮೇಘಶ್ರೀ
೯ನೇ ತರಗತಿ